
ಕಲ್ಯಾಣ ಕಿರಣ

ದೇವನಾಗಬಹುದು ಬಸವಣ್ಣನಾಗಲು ಬಾರದು

ಡಿಸೆಂಬರ್ - 2014 ಬೆಲೆ-20/-





ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

ಸಂಪುಟ-45 ಬಸವ ಶಕೆ -881 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-12 ಡಿಸೆಂಬರ್-2014 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2015ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297
Email :- kalyanakirana1970@gmail.com



ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತೆಂಟನೆಯ ಶರಣಮೇಳ

2015ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು 28ನೆಯ ಶರಣ ಮೇಳವು 2015ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು: 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು
Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105
State Bank of India ದ IFSC Code ಕೋಡ್ SBIN0007172

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಅಕ್ಕನ ಅಮರವಾಣಿ

– ಮಾತಾಜಿ

ಭಾಗ-12

199. ಮರಳಿ ಬಾರೆನಮ್ಮ

ಹೋದೆನೂರಿಗೆ ಇದ್ದೆ ನಾನಲ್ಲಿ,
ಹೋದಡೆ ಮರಳಿತ್ತ ಬಾರೆನವ್ವಾ;
ಐವರು ಭಾವದಿರು, ಐವರು ನಗೆವೆಣ್ಣು
ಈ ಐವರೈವರ ಕೂಡಿ ಎನ್ನ ಕಾಡುವರು
ಬೈವರು ಹೊಯ್ವರು ಮಿಗೆ ಕೇಡನುಡಿವರು.
ಇವರೈವರ ಕಾಟಕ್ಕೆ ನಾನಿನ್ನಾರೆ ಕಂಡವ್ವಾ
ಅತ್ತೆ ಮಾವ ಮೈದುನ ನಗೆವೆಣ್ಣು,
ಚಿತ್ತವನೊರೆದು ನೋಡುವ ಗಂಡ.
ಕತ್ತಲೆ ಮನೆಯಲ್ಲಿ ಕರೆದನ್ನವ ನಿಕ್ಕಿ
ಅತ್ತಿಗೆ ಹತ್ತೆಂಟ ನುಡಿವಳಮ್ಮ ತಾಯೆ.
ಉಪಮಾತೀತರು ಬಂಧುಬಳಗಂಗಳು.
ಶ್ರೀಶೈಲ ಚೆನ್ನಮಲ್ಲಿಕಾರ್ಜುನನ ದೇವರು ಒಲಿದಡೆ
ಮರಳಿ ಬಾರೆನಮ್ಮ ತಾಯೆ.

ಅಕ್ಕನವರು ಕಲ್ಯಾಣದ ಕಡೆಗೆ ಪ್ರಯಾಣ ಬೆಳೆಸಲು ಸಿದ್ಧರಾಗಿದ್ದಾರೆ. ತಾಯಿ ತಂದೆ ಪುನಃ ಬರಲು ಒತ್ತಾಯ ಮಾಡುತ್ತಿದ್ದಾರೆ. ಆಗ ಹೇಳುತ್ತಾರೆ, "ನಾನು ಊರಿಗೆ ಹೊರಟಿದ್ದೇನೆ. ಅಲ್ಲಿಗೆ ಹೋದ ಮೇಲೆ ಪುನಃ ಬರುವುದಿಲ್ಲ. ಈ ಸಂಸಾರದಲ್ಲಿ ಐವರು ಭಾವಂದಿರು ಮತ್ತು ಐವರು ನಗೆವೆಣ್ಣು (ಪಂಚೇಂದ್ರಿಯಗಳು ರೂಪದ ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಮತ್ತು ಅವರ ಐವರು ಪತ್ನಿಯರು ಪಂಚ ವಿಷಯಗಳಾದ ಶಬ್ದ, ಸ್ಪರ್ಶ, ರಸ, ಗಂಧ) ತುಂಬ ಕಾಡುತ್ತಾರೆ. ಬಹು ಬಗೆಯ ವಿಕಾರಗಳಿಗೆ ಈಡು ಮಾಡುತ್ತಾರೆ. ಅತ್ತೆ, ಮಾವ, ಮೈದುನ, ನಗೆವೆಣ್ಣು (ನೆಗೆಣ್ಣಿ) ಎಂಬ ನಾಲ್ಕು ಅಂತಃಕರಣಗಳು (ಚಿತ್ತ, ಮನ, ಬುದ್ಧಿ ಅಹಂ) ಬಹಳ ಕಾಡುತ್ತಾರೆ. ಇನ್ನು ನನ್ನ ಮನಸ್ಸನ್ನು ಪರೀಕ್ಷಿಸುವ ಗಂಡ. ಅಜ್ಞಾನದ ಕತ್ತಲೆಯಲ್ಲಿ ಕರೆದು ಊಟಕ್ಕಿಡುವ ವಿವೇಕವೆಂಬ ಅತ್ತಿಗೆ ಹತ್ತೆಂಟು ಮಾತು ನುಡಿವಳು. ಆದ್ದರಿಂದ ಇವರೆಲ್ಲರ ಸಹವಾಸವನೊಲ್ಲೆ. ಜ್ಞಾನಿಗಳಾದ ಶರಣರು ನನ್ನ ಬಂಧುಬಳಗ. ಪರಮಾತ್ಮನ ಅನುಗ್ರಹವಾದರೆ ನಾನು ಮರಳಿ ಇತ್ತ ಬಾರೆನು.

200. ಒಲ್ಲೆನೊಗೆತನವ

ಒಲ್ಲೆನೊಕ್ಕತನವ ಒಲ್ಲೆ, ನಾನಾರೆ;
ಕೊಲ್ಲ ಬಂದಾನೆನೆ ಕೋಪದಲಿ ನಲ್ಲ ! ॥ಪಲ್ಲವಿ॥

ಮಾವನೆಂಬವ ನನ್ನ ಮನವ ನೋಯಿಸಿದನೆ !
ಆವಾಗ ನಮ್ಮತ್ತೆ ಅಣಕವಾಡುವಳು.

ಭಾವನೆಂಬವ ಕೆಂಡ, ಬಲು ಬಾಧಿಸುತಿಹ;
ಬೇವುತಲಿರ್ದೆನು ಮತ್ತಿನ್ನಾರಿಗೆ ಹೇಳುವೆ. ॥ ೧ ॥

ಮನೆಯಾತನ ಕೊಂದು, ಮಾವನ ಹಳ್ಳವ ಕೂಡಿ,
ಬಿನುಗು ಭಾವದಿರನು ಬೀದಿ ಪಾಲ ಮಾಡಿ,
ನನಗೆ ವೈರಿಯಾದ ಅತ್ತೆಯನೆ ಕೊಂದು,
ಮನಸು ಬಂದಲ್ಲಿ ನಾನಿಪ್ಪೆನೆಲೆ ತಾಯಿ ! ॥ ೨ ॥

ಮುನ್ನಿನ ಪ್ರಮಥಗಣಂಗಳೆನ್ನ ಬಂಧು ಬಳಗ
ಉನ್ಮನಿಯ ಜ್ಯೋತಿ ಬ್ರಮ್ಹರಂಧ್ರದ ಮೇಲಿಪ್ಪ
ಚೆನ್ನಮಲ್ಲಿಕಾರ್ಜುನದೇವರ ದೇವನೆನ್ನನೊಲಿದಡೆ
ಇನ್ನಿತ್ತ ಬಾರೆ ನಾನೆಲೆ ತಾಯಿ ! ॥ ೩ ॥

ಈ ಲೌಕಿಕ ಜೀವನವ ನಾನು ಒಲ್ಲೆ. ನನ್ನ ಲೌಕಿಕ ಜೀವನದ ನೋಡಿದರೆ ನನ್ನ ನಲ್ಲನಾದ ಪರಮಾತ್ಮ ಸಿಟ್ಟಿನಿಂದ ಕೊಲ್ಲಬರುವನು. ಮಾವನೆಂಬುವ ಮನಸ್ಸು ನನ್ನನ್ನು ಬಹುಬಗೆಯ ಚಂಚಲತೆಯಿಂದ ಬಾಧಿಸುವುದು. ಆಗ ಬುದ್ಧಿ ಎಂಬುವ ಅತ್ತೆ ಅಣಕಿಸುವಳು. ಚಿತ್ತ ಎಂಬುವ ಭಾವ ಬಹಳ ಕೋಪಿಷ್ಠ. ॥ ೧ ॥

ಶರೀರ ಮನಗಳೆಂಬ ಮನೆಯಲ್ಲಿ ಒಡೆಯನಾಗಿರುವ ವಿಕಾರ ಎಂಬ ಮನೆಯಾತನ ಕೊಲ್ಲುವೆ. ಮನಸ್ಸು ಎಂಬ ಮಾವನ ಹಳ್ಳದ ಪಾಲು ಮಾಡುವೆ, ಹೊಯ್ದಾಡುವ ಚಿತ್ತವನ್ನು ಬೀದಿ ಪಾಲು ಮಾಡಿ, ನನ್ನ ವಿಕಾರಗಳಿಗೆ ಕಾರಣವಾಗುವ ಬುದ್ಧಿ ಎಂಬ ಅತ್ತೆಯನ್ನು ಕೊಂದು ಮನಸ್ಸು ಬಂದಲ್ಲಿ ನಿರ್ವಿಕಾರಳಾಗಿ ನಾನಿರುವೆ. ॥ ೨ ॥

ಶರಣ ಗಣಗಳೆನ್ನ ಬಂಧು ಬಳಗ. ಬ್ರಮ್ಹರಂಧ್ರದ ಮೇಲಿರುವ ಉನ್ಮನಿಯ ಜ್ಯೋತಿಯನ್ನು ನೋಡುವುದೇ ನನ್ನ ಗುರಿ. ಆ ದೇವನೊಲಿದರೆ ಇನ್ನು ನಾನು ಇತ್ತ ಬಾರೆನವ್ವ ತಾಯಿ!

201. ದೇವರಿಗೆ ಮನಸೋತೆ

ಕರಕರೆ ಕರಕರೆ ಘನವಯ್ಯೋ
ಕರೆದು ಹೇಳಿ ಎಮ್ಮವರಿಗೆ ಸುದ್ದಿಯ ! ॥ಪಲ್ಲವಿ॥

ಅತ್ತೆಯ ಮಾತುಗಳೆ ಚಿತ್ತವ ಕಲಕಿವೆ,
ಮತ್ತೆ ಮಾವನೊಳ್ಳಿದನಲ್ಲ; ಎನ್ನ
ಚಿತ್ತವಲ್ಲಭಪನಿಂದಾದ ಭಂಡ ನಾ
ವಿಸ್ತರಿಸಲಾರೆ; ಹೇಳಿ, ಎಮ್ಮವರಿಗೆ ॥ ೧ ॥

ಮುನ್ನ ಹುಟ್ಟಿದ ಮೂರು ಮಕ್ಕಳ ಕಾಟ,
ಕನ್ನೆಯರೈವರ ಕೂಡಿಕೊಂಡು
ಮನ್ನಣೆಯೆನಿತಿಲ್ಲ ಮೈದುನರೈವರ;
ಇನ್ನಿರಲಾರೆ, ಹೇಳಿ, ಎಮ್ಮವರಿಗೆ ॥ ೨ ॥

ನಾರಿಯರೈವರ ಕೂಡಿಕೊಂಡು, ನಾ
ದಾರಿ ಸಂಗಡವಾಗಿ ಬರುತಿರಲು
ಭೋರನೆ ಶ್ರೀಶೈಲ ಚೆನ್ನಮಲ್ಲೇಶನ ದೇವಂಗೆ
ಓರಂತೆ ಮನಸೋತೆ ಸಾರಿತ್ತ ಬಾರೆನೆ, ತಾಯಿ ॥ ೩ ॥

ಅವ್ವಾ, ನನಗೆ ಕೆಲವರ ಕಾಟ(ಕಿರಿಕಿರಿ)ಬಹಳ. ಇದನ್ನು ಇತರರಿಗೆ ತಿಳಿಸಿ ಸಮಾಧಾನ ಮಾಡು. ಅದಕ್ಕಾಗಿ ನಾನು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ಈ ಲೌಕಿಕ ಜೀವನ ನನಗೆ ಬೇಡವಾಗಿದೆ. ವಿವೇಕ ಎಂಬ ಅತ್ತೆಯ ಮಾತುಗಳು ನನ್ನ ಮನಸ್ಸನ್ನು ಕಲಕಿ ಚುಚ್ಚುತ್ತವೆ. ಮತ್ತೆ ನನ್ನ ಮನಸ್ಸೆಂಬ ಮಾವ ಒಳ್ಳೆಯವನಲ್ಲ; ಅತ್ತಿತ್ತ ಹರಿದಾಡುತ್ತದೆ. ಎನ್ನ ಚಿತ್ತ ವಲ್ಲಭನಾದ ದೇವರು ಬಹಳ ಕಾಟ ಕೊಡುತ್ತಾನೆ. ಇದನ್ನು ನಾನು ವಿವರಿಸಿ ಹೇಳಲಾರೆ. ನೀನು ಅವರಿಗೆ ಹೇಳು. ॥ ೧ ॥

ತಾಪತ್ರಯಗಳೆಂಬ ಮೂರು ಮಕ್ಕಳು ಸದಾ ಕಾಡುತ್ತವೆ. ಪಂಚೇಂದ್ರಿಯಗಳೆಂಬ ಮೈದುನರೈವರು ಪಂಚತನ್ಮಾತ್ರೆಗಳನ್ನು ಕೂಡಿಕೊಂಡು ಕಾಡುತ್ತವೆ. ಆದ್ದರಿಂದ ಈ ಲೌಕಿಕರ ಮಧ್ಯೆ ಇರಲಾರೆ ಎಂಬುದನ್ನು ಎಲ್ಲರಿಗೂ ತಿಳಿಸಿಹೇಳು. ॥ ೨ ॥

ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಎಂಬ ಐವರನ್ನು ಜೊತೆಗೆ ಇರಿಸಿಕೊಂಡು ನಾನು ಶರಣ ಪಥದಲ್ಲಿ ಸಾಗುತ್ತಲಿರುವಾಗ ಪರಮಾತ್ಮನಿಗೆ ಮನಸೋತೆ. ಆದ್ದರಿಂದ ನಾನು ಪುನಃ ಇತ್ತ ಬರುವುದಿಲ್ಲ.

202. ಶರಣರ ನಿಬ್ಬಣ

ನಿಬ್ಬಣಕ್ಕೆ ಹೋಗುತ್ತೈದೇನೆ, ನೋಡಕ್ಕಯ್ಯ !
ನಿಬ್ಬಣಕ್ಕೆ ಹೋದಡೆ, ಮರಳಿ ಬಾರೆನಕ್ಕಯ್ಯ ! ॥ಪಲ್ಲವಿ॥

ಧನವು ಧಾನ್ಯ ಮನೆಯೊಳುಂಟು;
ಘನವು ಎನ್ನ ಮನೆಯೊಳಿಲ್ಲ;
ಮನೆಯ ಗಂಡ ಮುನಿಯಲೆನ್ನ ಮಂಡೆ ಬೋಳಾಗದು ! ॥ ೧ ॥

ಮಂಡೆದುರುಬ ಮಿಂಡಿತನದಿ
ನಿಬ್ಬಣಕ್ಕೆ ನಾ ಹೋದಡೆ
ಮಂಡೆ ಬೋಳಾಗದನಕವಪ್ಪುದೆನಗೆ ನಿಬ್ಬಣ? ॥ ೨ ॥

ಗಂಡನುಳ್ಳ ಗರತಿ ನಾನು
ರಂಡೆಯಾದೆನಯ್ಯೊ; ಇನ್ನು
ಕೊಂಡೊಯ್ಯೋ, ಶಿವನೆ, ಎನ್ನ ಹುಟ್ಟಿದೈವರು ಮಕ್ಕಳ! ॥ ೩ ॥

ಕಾಮವೆಂಬ ಹೊಲನ ದಾಂಟಿ,
ಸೀಮೆಯೆಂಬ ಹೊಲಬನರೆದು,
ಹೇಮಗಿರಿಯ ಹೊಕ್ಕ ಬಳಿಕ ಮರಳಿ ಬಾರೆನಕ್ಕಯ್ಯ! ॥ ೪ ॥

ಸಾಗಿ ಬೇಗದಿಂದೆ
ಹೋಗಿ ನೆರೆಯದಿದ್ದರೆ,
ಚೆನ್ನಮಲ್ಲಿಕಾರ್ಜುನಯ್ಯನ ದೇವನು ಮುನಿವ ಕಾಣಕ್ಕಯ್ಯ ! ॥ ೫ ॥

ನಿಬ್ಬಣ ಎಂದರೆ ಮದುವೆಗೆ ಹೋಗುವ ಜನರ ಸಮೂಹ, ಕಲ್ಯಾಣದಲ್ಲಿ ಇರುವ ಶರಣ ಸಮೂಹ ಒಂದು ನಿಬ್ಬಣ. ಅವರೆಲ್ಲರೂ ಕೂಡಿ ಲಿಂಗಪತಿ ಎಡೆಗೆ ನಡೆದಿದ್ದಾರೆ. ಈ ಗುಂಪಿನಲ್ಲಿ ಅಕ್ಕನವರು ಸೇರಿಕೊಳ್ಳಲು ಬಯಸಿದ್ದಾರೆ. ಅಲ್ಲಿಗೆ ಹೋದರೆ ಮರಳಿ ನಾನು ಪೂರ್ವಾಶ್ರಯಕ್ಕೆ, ಊರಿಗೆ ಬಾರೆನು ಎಂದು ಬೆಡಗಿನ ಭಾಷೆಯಲ್ಲಿ ಗೆಳತಿಯರಿಗೆ ಹೇಳುತ್ತಾರೆ.॥ಪ॥

ಇಲ್ಲಿ, ಈ ಲೌಕಿಕ ಜೀವನದಲ್ಲಿ ಧನ ಉಂಟು, ಎಲ್ಲ ಸಂಪತ್ತುಂಟು. ಆದರೆ ಘನತರವಾದ ಪರಮಾತ್ಮ ತತ್ವವಿಲ್ಲಿಲ್ಲ. ನನ್ನ ಪತಿ ಪರಮಾತ್ಮ ಮುನಿಯುತ್ತಿದ್ದಾನೆ. ದೇವರು ಮುನಿಯುವ ತನಕ ಅಹಂಕಾರ ತೊಲಗದು. (ಮಂಡೆ ಬೋಳಾಗದು) ॥ ೧ ॥

ಮಂಡೆಯಲ್ಲಿರುವ ಅಹಂಕಾರವಳಿಯದೆ ನಾನು ಮಿಂಡೆಯಾಗಿ ಶರಣರ ಸಂಗ (ನಿಬ್ಬಣ)ಕ್ಕೆ ಹೋದರೆ ಆ ನಿಬ್ಬಣದವರು ನನ್ನನ್ನು ಸೇರಿಸಿಕೊಳ್ಳರು ॥ ೨ ॥

ನಾನು ಗಂಡನುಳ್ಳ ಗರತಿ(ದೇವರ ಪತ್ನಿ) ಆದರೆ ಅವನನ್ನೊಲಿಸಲಾರದೆ ರಂಡೆಯಾಗಿದ್ದೇನೆ. ನನಗೆ ಹುಟ್ಟಿರುವರು ಐವರು ಮಕ್ಕಳು(ಪಂಚ ವಿಷಯಗಳು- ಶಬ್ದ, ಸ್ಪರ್ಶ, ರೂಪ, ರಸ, ಗಂಧ) ಇವರನ್ನು ಶಿವನೆ ನೀನು ಕೊಂಡೊಯ್ಯು. ಈ ನಿಬ್ಬಣದ ಯಾತ್ರೆಯಲ್ಲಿ ಕಾಮ ಎಂಬ ಹೊಲವನ್ನು ದಾಟಬೇಕು. ॥ ೩ ॥

ಸಾಕಷ್ಟು ಸೀಮೆಗಳೆಂಬ ಹೊಲಬು ಕ್ರಮಿಸಬೇಕು. ನಂತರ ಸಿಕ್ಕುವ ಹೇಮಗಿರಿ ಎಂಬ ಕಶೇರುಕರಜ್ಜ (ಸುಷುಮ್ನಾ ನಾಡಿ)ದ ತುದಿಯಲಿರುವ ಸಹಸ್ರಾರ ಚಕ್ರವನ್ನು ಹೊಗಬೇಕು. ಈ ಸಾಧನೆ ಸಿದ್ಧಿಸಿದ ಬಳಿಕ ನಾನು ಇತ್ತ ಪುನಃ ಬರುವುದಿಲ್ಲ. ॥ ೪ ॥

ಬೇಗಬೇಗನೆ ಸಾಗಿ, ನನ್ನ ಪತಿ ದೇವನನ್ನು ಕೂಡದಿದ್ದರೆ ಅವನು ಮುನಿಯುವನು॥೫॥

203. ತವರು ಮನೆ ಕಲ್ಯಾಣ

ಹೋದೆನೂರಿಗೆ ಇದ್ದೆ ನಾನಲ್ಲಿ
ಹೋದಡೆ ಮರಳಿ ಬಾರೆನವ್ವ ತಾಯಿ ॥ಪಲ್ಲವಿ॥

ಅತ್ತೆ, ಮಾವನು, ಮೈದುನ, ಮಲಮಗ,
ಚಿತ್ತವನೊರೆದು ನೋಡುವ ಗಂಡನು !
ಕತ್ತಲ ಮನೆಯಲ್ಲಿ ಕರೆದು ಅನ್ನವನಿಕ್ಕಿ
ಅತ್ತಿಗೆ ಹತ್ತೆಂಟ ಬಯ್ವಳವ್ವ ತಾಯಿ! ॥ ೧ ॥

ಅಯ್ವರು ಭಾವದಿರೈವರು ನಗೆವೆಣ್ಣು
ಅಯ್ವರಯ್ವರ ಕೂಡಿ ಕಾಡುವರು,
ಹೊಯ್ವರು, ಬಯ್ವರು, ಮಿಗೆ ನೋಯ ನುಡಿವರೀ-
ರಯ್ವರ ಕಾಟಕಾನಾರೆನವ್ವ ತಾಯಿ ! ॥ ೨ ॥

ಎನ್ನ ಮಾತೆ-ಪಿತರುಗಳಮರಗಣಂಗಳು

ಎನ್ನ ತವರು ಮನೆ ಕಲ್ಯಾಣವು!
ಕರುಣಿ ಚೆನ್ನಮಲ್ಲಿಕಾರ್ಜುನನ ದೇವನ ಬಳಿಗೆ ಹೋದಡೆ
ಮರಳಿತ್ತ ಬಾರೆನವ್ವ ತಾಯಿ ! ॥ ೩ ॥

"ಅವ್ವಾ, ನಾನು ಊರಿಗೆ ಹೋಗುವೆನು. ಅಲ್ಲೇ ಇರುವೆನು. ಹೋದ ಮೇಲೆ ಪುನಃ ಇತ್ತ ಬರುವುದಿಲ್ಲ ತಾಯೆ." ॥ ಪ ॥

ಇಲ್ಲಿ ನನಗೆ ಬಹುಜನರ ಕಾಟ. ದುರ್ಮನ ಎಂಬ ಅತ್ತೆ, ದುರ್ಬುದ್ಧಿ ಎಂಬ ಮಾವ, ದುಶ್ಚಿತ್ತ ಎಂಬ ಮೈದುನ, ದುರಹಂಕಾರ ಎಂಬ ಮಲಮಗ ನನ್ನನ್ನು ಸದಾಕಾಲ ಪರೀಕ್ಷೆ ಮಾಡುವ ಅಂತರ್ಮನ (Inner Voice) ಎಂಬ ಗಂಡನು. ತುಂಬಿರುವ ಅಜ್ಞಾನ ಎಂಬ ಕತ್ತಲೆಯ ಮನೆಯಲ್ಲಿ ಆಹಾರವನ್ನು ಕೊಡುತ್ತ ವಿವೇಕವೆಂಬ ಅತ್ತಿಗೆ ಹತ್ತೆಂಟು ರೀತಿ ದೂಷಿಸುವಳು. ॥ ೧ ॥

ಇವರುಗಳ ಜೊತೆ ಕಾಡುವವರು ಪಂಚೇಂದ್ರಿಯಗಳೆಂಬ ಐವರು ಭಾವಂದಿರು ಮತ್ತು ಅವರ ಹೆಂಡಂದಿರಾದ ಪಂಚ ತನ್ಮಾತ್ರೆಗಳು (ವಿಷಯಗಳು). ಈ ಉಭಯತರೂ ಕೂಡಿ ನನ್ನನ್ನು ಕಾಡುವರು. ಹೊಡೆಯುವರು, ಬೈಯುವರು, ನೋಯುವಂತೆ ಮಾತನಾಡುವರು. ಈ ಹತ್ತು ಜನರ ಕಾಟ ಸಹಿಸಿಕೊಳ್ಳಲಾರೆನು. ॥ ೨ ॥

ನನ್ನ ತಂದೆ- ತಾಯಿಗಳು ಕಲ್ಯಾಣದ ಅಮರಗಣಂಗಳು. ನನ್ನ ನಿಜವಾದ ತವರು ಮನೆ ಕಲ್ಯಾಣವು. ಕರುಣಿ ಚನ್ನಮಲ್ಲಿಕಾರ್ಜುನನ ದೇವನ ಬಳಿಗೆ ಹೋದರೆ ಅದು ನನ್ನ ಅಂತಿಮಗುರಿ. ಮರಳಿ ನಾನು ಇತ್ತ ಬಾರೆನವ್ವ ತಾಯಿ."

204. ಪೂರ್ವಾಶ್ರಮಕ್ಕೆ ಶರಣಾರ್ಥಿ

ಎಲೆ ತಾಯೆ ನೀನಂತಿರು,
ಎಲೆ ತಂದೆ ನೀನಂತಿರು,
ಎಲೆ ಬಂಧುವೆ ನೀನಂತಿರು,
ಎಲೆ ಕುಲವೆ ನೀನಂತಿರು,
ಎಲೆ ಬಲವೆ ನೀನಂತಿರು,
ಚೆನ್ನಮಲ್ಲಿಕಾರ್ಜುನನ ಕೂಡುವ ಭರದಿಂದ ಹೋಗುತ್ತಿದ್ದೇನೆ.
ನಿಮಗೆ ಶರಣಾರ್ಥಿ ಶರಣಾರ್ಥಿ.

"ಅವ್ವಾ, ನೀನು ಅಲ್ಲೇ ನಿಲ್ಲು. ಅಪ್ಪಾ, ನೀನಲ್ಲೇ ಇರು. ನನ್ನ ಬಂಧುಗಳೇ ಅಲ್ಲೇ ನಿಲ್ಲಿ. ನಾನೀಗ ತಾಯಿ ತಂದೆ ಬಂಧುಗಳನ್ನು ಬಿಟ್ಟು, ನನ್ನ ಕುಲವನ್ನು ಬಿಟ್ಟು, ನನ್ನ ಹಿಂದಿನ ಬಲವನ್ನು ಬಿಟ್ಟು ಹೊರಟಿದ್ದೇನೆ. ಪರಮಾತ್ಮನನ್ನು ಕೂಡುವ ಭರದಿಂದ ಹೋಗುತ್ತಿದ್ದೇನೆ. ನಿಮ್ಮೆಲ್ಲರಿಗೂ ಶರಣು ಶರಣಾರ್ಥಿ.

205. ಸ್ವಗತ ಧೈರ್ಯ

ಆರೂ ಇಲ್ಲದವಳೆಂದು ಆಳಿಗೊಳಲುಬೇಡ ಕಂಡೆಯಾ?
ಏನ ಮಾಡಿದಡೂ ನಾನಂಜುವಳಲ್ಲ.

ತರಗೆಲೆಯ ಮೆಲಿದು ಆನಿಹೆನು,
ಸರಿಯ ಮೇಲೊರಗಿ ಆನಿಹೆನು.
ಚೆನ್ನ ಮಲ್ಲಿಕಾರ್ಜುನದೇವರ ದೇವಯ್ಯಾ, ಕರ ಕಾಡಿನೋಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು.

ಗಟ್ಟಿ ಮನಸ್ಸು ಮಾಡಿ ಅಕ್ಕನವರು ಉಡುತಡಿಯಿಂದ ಒಬ್ಬಂಟಿಯಾಗಿ ಹೊರಡುವರು. ಮನದೊಳಗೆ ಅಳುಕು ನಡುಗಿಸುತ್ತದೆ. ತಾನು ತುಳಿಯುತ್ತಿರುವುದು ಅಸಹಜವಾದ, ಅಸಾಮಾನ್ಯವಾದ ದಾರಿ ಎನ್ನಿಸುತ್ತದೆ. ತಮ್ಮ ಮನಸ್ಸಿಗೆ ತಾವೇ ಧೈರ್ಯ ಹೇಳಿಕೊಳ್ಳುತ್ತಾರೆ. ಯಾರೂ ಸಹಾಯಕ್ಕೆ ಇಲ್ಲ ಎಂದು ಹೆದರಿಕೊಳ್ಳಬೇಡ ಮನವೆ. ಏನು ಸಂಭವಿಸಿದರೂ ನಾನು ಅಂಜುವವಳಲ್ಲ. ಆಹಾರ ಸಿಗದಿದ್ದರೆ ಒಣಗಿದ ಎಲೆ (ತರಗೆಲೆ)ಯ ಮೆದ್ದು ನಾನಿರುವೆನು. ಮಲಗಲು ಜಾಗ ಸಿಗದಿದ್ದರೆ ಬೆಟ್ಟದ ಇಳಿಜಾರಿನ ಮೇಲೆ ಮಲಗಿ ನಾನಿರುವೆನು ದೇವಾದಿದೇವನ ಕಾಟ ಇನ್ನೂ ಜಾಸ್ತಿಯಾಗಿ ಕಾಡಲು ಶುರುವಾದರೆ ನನ್ನ ಒಡಲನ್ನು ಪ್ರಾಣವನು ದೇವನಿಗೆ ಅರ್ಪಿಸಿ ಶುದ್ಧವಾಗುವೆನು.

206. ತವರು ಮನೆ ಕಲ್ಯಾಣ

ಮೋಹವುಳ್ಳಲ್ಲಿ ಮಚ್ಚುವಂತೆ ಮಾಡಯ್ಯಾ
ಮೋಹಗೊಂಡಲ್ಲಿ ಕುರುಳುವ ಕೊಯ್ಯಯ್ಯಾ
ಮೋಹಗೊಂಡಲ್ಲಿ ಬೆರಳುವ ಕಡಿಯಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ
ನೊಂದೆನೆಂದಡೆ ಮನಕತ ನೀಡಯ್ಯಾ

ಪರಮಾತ್ಮ, ನಿನ್ನ ಕುರಿತು ನನಗೆ ನಿಜವಾದ ಮೋಹವಿದ್ದರೆ ನಿಜವಾಗಿ ನಿನ್ನನ್ನು ಪ್ರೀತಿಸುವಂತೆ ಮಾಡು. ಮೋಹ ಉಂಟಾಗಿದ್ದರೆ ನನ್ನ ತಲೆಯ ಕೂದಲನ್ನು ಕತ್ತರಿಸಿ ಪರೀಕ್ಷಿಸು. ಇನ್ನೂ ಮುಂದುವರಿದು ನನ್ನ ಬೆರಳನ್ನು ಕಡಿ, ನೀನು ಕೊಡುವ ಕಠಿಣ ಹಿಂಸೆಗೆ ಸ್ವಲ್ಪವಾದರೂ ಬೇಸರ ಪಟ್ಟರೆ ಇನ್ನೂ ಹೆಚ್ಚಿನ ದುಃಖ (ಮನಕತ) ನೀಡು.

207. ಪ್ರಕೃತಿಗೆ ಮೊರೆ

ಅಳಿಸಂಕುಳವೆ ಮಾಮರವೆ, ಬೆಳುದಿಂಗಳೆ, ಕೋಗಿಲೆಯೆ
ನಿಮ್ಮನೆಲ್ಲರನೂ ಒಂದ ಬೇಡುವೆನು
ಎನ್ನೊಡೆಯ ಚೆನ್ನ ಮಲ್ಲಿಕಾರ್ಜುನದೇವರ ದೇವನ
ಕಂಡಡೆ ಕರೆದು ತೋರಿರೆ.

" ದುಂಬಿಗಳ ಸಮೂಹವೆ, ಮಾವಿನ ಮರವೇ, ಬೆಳುದಿಂಗಳೇ, ಕೋಗಿಲೆಯೇ ನಿಮ್ಮನೆಲ್ಲರನೂ ಒಂದ ಬೇಡುವೆನು. ಎನ್ನೊಡೆಯ ಪರಮಾತ್ಮನನ್ನು ನೀವು ಕಂಡಿದ್ದರೆ ನನಗೆ ತೋರಿಸಿರಿ." ಎಂದು ಅಕ್ಕನವರು ಪ್ರಕೃತಿಯನ್ನು ಬೇಡುವರು.

ಅಕ್ಕನವರು ಕನ್ನಡದ ಪ್ರಥಮ ಕವಯಿತ್ರಿ ಅವರ ಕೆಲವು ವಚನಗಳಲ್ಲಿ ಕಲ್ಪನೆಯು ಸುಂದರವಾಗಿ ಚಲ್ಲವರಿದಿದೆ. ದುಂಬಿಯನ್ನೇ ಏಕೆ ಕೇಳುತ್ತಾರೆ? ಹೂವಿನಿಂದ ಹೂವಿಗೆ

ಹಾರಾಡಿ ದುಂಬಿಯು ಮಕರಂದವನ್ನು ಪಾನ ಮಾಡುವುದು. ದೇವರು ಸಹ ದುಂಬಿಯಂತೆ ಭಕ್ತರ ಹೃದಯ ಕಮಲದಲ್ಲಿರುವ ಭಕ್ತಿಯ ಮಕರಂದವನ್ನು ಪಾನ ಮಾಡುವನು. ಮಾವಿನ ಮರ ನೆರಳನ್ನು ನೀಡುವುದು, ಹಣ್ಣನ್ನು ನೀಡುವುದು. ಹಾಗೆ ದೇವರು ಭಕ್ತರಿಗೆ ಆಶ್ರಯವನ್ನು ನೀಡುವನು ಮಾತ್ರವಲ್ಲ ಮುಕ್ತಿಯ ಫಲವನ್ನೂ ನೀಡುವನು. ಚಂದ್ರನು ತನ್ನ ಕಿರಣಗಳಿಂದ ದೇಹ ಮನಸ್ಸುಗಳನ್ನು ತಂಪುಗೊಳಿಸುವಂತೆ ಪರಮಾತ್ಮನು ತನ್ನ ಕಾರುಣ್ಯದ ಕಿರಣಗಳಿಂದ ಭಕ್ತನನ್ನು ಸಂಪ್ರೀತಗೊಳಿಸುವನು. ಕೋಗಿಲೆಯು ತನ್ನ ಮಧುರ ಧ್ವನಿಯಿಂದ ಎಲ್ಲರನ್ನು ಸಹರ್ಷಗೊಳಿಸುವಂತೆ ದೇವನು ತನ್ನ ಸಾಂತ್ವನ ಪೂರ್ಣ ಮಾತುಗಳಿಂದ ಭಕ್ತರನ್ನು ಸಂತೈಸುವನು. ಹೀಗಾಗಿ ಅಕ್ಕನವರು ವಿಶಿಷ್ಟ ವಸ್ತುಗಳನ್ನೇ ಮಾತನಾಡಿಸಿದ್ದಾರೆ.

208. ಎನಗೇಕೆ ಮುಖದೋರೆ?

ವನವೆಲ್ಲ ನೀನೆ, ವನದೊಳಗಣ ದೇವತರುವೆಲ್ಲಾ ನೀನೆ,
ತರುವಿನೊಳಗಾಡುವ ಖಗ ಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನದೇವರ ದೇವಾ
ಸರ್ವಭರಿತನಾಗಿ ಎನಗೇಕೆ ಮುಖದೋರೆ?

"ಪರಮಾತ್ಮ, ಧರ್ಮಶಾಸ್ತ್ರಗಳು ನಿನ್ನ ಸ್ವರೂಪವನ್ನು ಬಗೆಬಗೆಯಾಗಿ ಬಣ್ಣಿಸುತ್ತವೆ. ದೇವರು ಸರ್ವವ್ಯಾಪಿ, ವನದೊಳಗೆಲ್ಲ ತುಂಬಿದ್ದಾನೆ; ವನದೊಳಗಿರುವ ತರುಮರಗಳೆಲ್ಲದರಲ್ಲಿ ತುಂಬಿದ್ದಾನೆ. ಅರಣ್ಯದಲ್ಲಿ ತಿರುಗಾಡುವ ಪಕ್ಷಿ–ಪ್ರಾಣಿ (ಖಗ–ಮೃಗ)ಗಳಲ್ಲೆಲ್ಲ ತುಂಬಿದ್ದಾನೆ ಎಂದು ಹೇಳಲಾಗುತ್ತದೆ. ನಾನು ಇಷ್ಟು ಹಂಬಲಿಸುತ್ತಿದ್ದೇನೆ. ಇವುಗಳ ಮೂಲಕ ನನಗೆ ಏಕೆ ಮುಖ ತೋರುತ್ತಿಲ್ಲ?" ಎಂದು ಅಕ್ಕನವರು ದೇವರನ್ನು ಕೇಳುತ್ತಿದ್ದಾರೆ.

209. ದಿವ್ಯಾನುಭವದ ಬೇಂಟೆ

ಊರ ನಡುವೆ ಒಂದು ಬೇಂಟೆ ಬಿದ್ದಿತ್ತು.
ಆರು ಕಂಡವರು ತೋರಿರಯ್ಯಾ.
ಊರಿಗೆ ದೂರವೆನಗುಸೆಯನಿಕ್ಕುವೆ;
ಅರಸುವೆನೆನ್ನ ಬೇಂಟೆಯ.
ಅರಿತು ಅರಿಯದೆ ಒಂದು ಬೇಂಟೆಯನಾಡಿದೆನು.
ಅರಸಿಕೊಡಾ ಚೆನ್ನಮಲ್ಲಿಕಾರ್ಜುನದೇವರ ದೇವಾ

ದೇಹವೆಂಬ ಊರಿನಲ್ಲಿ ಹೃದಯ ಮಧ್ಯ ಎಂಬ ಸ್ಥಾನದಲ್ಲಿ ದಿವ್ಯಾನುಭವ ಎಂಬ ಬೇಂಟೆ ಬಿದ್ದಿತ್ತು. ನೀವ್ಯಾರಾದರು ಕಂಡಿದ್ದರೆ ಕರೆದು ತೋರಿಸಿರಿ. ಇಡೀ ಇಡೀ ಊರಿಗೇ ನಾನು ಒಂದು ಸವಾಲು ಹಾಕುತ್ತೇನೆ. ನಾನು ದಿವ್ಯಾನುಭವದ ಬೇಂಟೆಯನ್ನು ಅರಸುತ್ತೇನೆ. ತಿಳಿದೋ ತಿಳಿಯದೆಯೋ ನಾನು ಬೇಂಟೆಯಾಡುತ್ತಿದ್ದೇನೆ. ದೇವರೆ, ನನಗೆ ದೊರೆಯುವಂತೆ ಮಾಡು.

(ಮುಂದುವರಿಯುವುದು)

ಅಕ್ಕನ ಯೋಗಾಂಗ ತ್ರಿವಿಧಿ ಭಾಗ-7

– ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

35 ಹತ್ತು ಸಾಗರದಲ್ಲಿ ಮತ್ತೆ ಸ್ನಾನವ ಮಾಡಿ
ಮತ್ತೊಂದು ತೆರದ ಉಣಿಸುಗಳ । ನಾನುಂಡು
ಕತ್ತಲೆಯಳಿದು ಬೆಳಗಾದೆ ॥

ಮಾನವನ ದೇಹದಲ್ಲಿ ಆಧಾರಚಕ್ರ, ಸ್ವಾಧಿಷ್ಠಾನಚಕ್ರ ಮಣಿಪುರಕಚಕ್ರ, ಅನಾಹತಚಕ್ರ, ವಿಶುದ್ಧಿಚಕ್ರ, ಆಜ್ಞಾ ಚಕ್ರ, ಬ್ರಹ್ಮಚಕ್ರ, ಶಿಖಾಚಕ್ರ, ಪಶ್ಚಿಮಚಕ್ರ, ಅಣುಚಕ್ರ ಎಂಬ ಹತ್ತು ಚಕ್ರಗಳುಂಟು,ಇವು ಶಕ್ತಿ ಕೇಂದ್ರಗಳು.ಇಲ್ಲಿ ಸದ್ಭಕ್ತನು , ಶ್ರದ್ಧಾ, ನಿಷ್ಠೆ, ಅವಧಾನ , ಅನುಭವ, ಆನಂದ, ಸಮರಸ ಆದಿ ಎಂಬ ಹತ್ತು ತೆರನಾದ ಸದ್ಭಕ್ತಿ ಜಲದಲ್ಲಿ ಸಾಧನಪಥದಲ್ಲಿ ಮಿಂದು ಸುಜ್ಞಾನದ ಹಣ್ಣುಗಳನ್ನು ಭುಂಜಿಸಿ ಸಂತೃಪ್ತಿಯ ಸದ್ಭಾವದಲ್ಲಿ ಮೈಮರೆದಾಗ ಜನ್ಮ ಜನ್ಮಾಂತರದ ಅಜ್ಞಾನದ ಕತ್ತಲೆಯಳಿದು ಬೆಳಗಿನೊಳಗಣ ಬೆಳಗು ಮಹಾ ಬೆಳಗಾಗಿರುವ ಚಿದ್ಬೆಳಗಿನಲ್ಲಿ ಓಲಾಡುತ್ತಿರುವುದನ್ನು ಮಹಾನುಭಾವಿ ವೀರ ವೈರಾಗ್ಯನಿಧಿ ಮಹಾದೇವಿಯಕ್ಕನವರು ತಮ್ಮ ಅನುಭಾವವನ್ನು ಹಂಚಿಕೊಳ್ಳುತ್ತಿದ್ದಾರೆ.

36. ಕರ್ತೃ ಶ್ರೀ ಗುರುರಾಯ ಮುತ್ತಿನ ಕವಚವ
ಅರ್ತಿಯಿಂದೆನಗೆ ಅಳವಡಿಸೆ । ಅದರಿಂದ
ಕಿತ್ತೆನು ಮಾಯಾ ಬಲೆಗಳನು ॥

ಸೇಶ್ವರವಾದಿ ಧರ್ಮ ಹಾಗು ನಿರೀಶ್ವರವಾದಿಧರ್ಮ ಎರಡುವಿಧ. ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣಕರ್ತನಾದ ಒಬ್ಬ ದೇವನಿದ್ದಾನೆ ಎಂದು ನಂಬುವ ಧರ್ಮ ಸೇಶ್ವರವಾದಿ ಧರ್ಮ. ಇದನ್ನು ಒಪ್ಪದೇ ಇದ್ದುದು ನಿರೀಶ್ವರವಾದಿ ಧರ್ಮ. ದೇವನಿಗೆ ಐದು ಕಾರ್ಯಗಳು , ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹ, ನಾಲ್ಕರ ಅಧಿಕಾರವನ್ನು ಯಾರಿಗೂ ಕೊಡದೆ ಅನುಗ್ರಹವನ್ನು ಮಾತ್ರ ಸದ್ಗುರುವಿಗೆ ಕರುಣಿಸಿದ್ದಾನೆ ಆ ಶಕ್ತಿಯಿಂದ ಸದ್ಗುರುವು ಅನುಗ್ರಹವನ್ನು ಮಾಡಬಲ್ಲವನಾದ ಕಾರಣ, ಯಾವ ರೀತಿ ಸ್ವಾತಿಯ ಬಿಂದು ಬಾಯಿ ತೆರೆದುಕೊಂಡು ಕುಳಿತಿರುವ ಕಪ್ಪೆ ಚಿಪ್ಪಿನಲ್ಲಿ ಬಿದ್ದಾಗ ಅದು ಸಮುದ್ರದ ಆಳಕ್ಕೆ ಹೊಗುತ್ತದೆ. ಅಲ್ಲಿ ಮೃದ್ವಂಗಿ ಅನ್ನುವ ಹುಳ ಆ ಬಿಂದುವಿನ ಸುತ್ತ ತಿರುಗುತ್ತಾ ತಿರುಗುತ್ತಾ ಏಳು ವರ್ಷಗಳ ನಂತರ ನಿಜ (ಖರೆ) ಮುತ್ತನ್ನಾಗಿ ಅನುಗ್ರಹಿಸಿ ಪರಿವರ್ತಿಸುತ್ತದೆ. ಅದರಂತೆ ಶ್ರೀ ಗುರುರಾಯನು ದೀಕ್ಷೆಯ ಮೂಲಕ ಸ್ಥೂಲ ಶರೀರಕ್ಕೆ ಸಾಕಾರ ಇಷ್ಟಲಿಂಗವನ್ನು ಸ್ಥಾಪಿಸಿ, ಸೂಕ್ಷ್ಮ ಶರೀರಕ್ಕೆ ಕರ್ಣಗಳ ಮುಖಾಂತರ ದೇವ ಮಂತ್ರವನ್ನು ಉಸುರಿ ಪ್ರಾಣಲಿಂಗವನ್ನು ಪ್ರತಿಷ್ಠಾಪಿಸಿ ಹಾಗು ಎರಡೂ ಪರುಷ ಹಸ್ತಗಳನ್ನು ಮಸ್ತಕದ ಮೇಲಿಟ್ಟು ಕಾರಣ ಶರೀರಕ್ಕೆ ಭಾವಲಿಂಗವನ್ನು ಸಂಸ್ಥಾಪಿಸುವನು.

ಮಣ್ಣ ಮಡಕೆ ಮಣ್ಣಾಗದು ಕ್ರಿಯೆಯಳಿದು,
ಬೆಣ್ಣೆ ಕರಗಿ ತುಪ್ಪವಾಗಿ ಮತ್ತೆ ಬೆಣ್ಣೆಯಾಗದು ಕ್ರಿಯೆಯಳಿದು,
ಹೊನ್ನು ಕಬ್ಬುನವಾಗದು ಕ್ರಿಯೆಯಳಿದು,

ಮುತ್ತು ನೀರಲಿ ಹುಟ್ಟಿ ಮತ್ತೆ ನೀರಾಗದು ಕ್ರಿಯೆಯಳಿದು.
ಲಿಂಗದೇವನ ಶರಣನಾಗಿ ಮರಳಿ ಮಾನವನಾಗನು ಕ್ರಿಯೆಯಳಿದು"

ಎಂಬಂತೆ ಶ್ರೀ ಗುರುರಾಯನು ರಕ್ಷಾ ಕವಚ ಹೊದಿಸಿ ಕರುಣೆಯಿಂದ ಅನುಗ್ರಹಿಸಿ ಲಿಂಗಾಂಗ ಯೋಗದ, ಕುಂಡಲಿನಿ ಜಾಗೃತಿ ಯೋಗದ ಸಾಧನಾ ಪಥವನ್ನು ಅರುಹಿ, ಅಂಗದಲ್ಲಿ ಆಚಾರವನ್ನು, ಅಂತರಂಗದಲ್ಲಿ ಅರಿವನ್ನು, ಆತ್ಮಸಂಗದಲ್ಲಿ ಅನುಭಾವವನ್ನು ಅಳವಡಿಸಿಕೊಂಡು ಭಕ್ತತ್ವ, ಗುರುತ್ವ ಹಾಗೂ ಜಂಗಮತ್ವದ ಆರೋಹಣ ಕ್ರಮವನ್ನು ಪಡೆದುಕೊಳ್ಳಲು ಬೋಧನೆ ಮಾಡಿದ್ದನ್ನ ಚಾಚೂ ತಪ್ಪದೇ ಆಚರಿಸಿ ಅನುಷ್ಠಾನಿಸಿ ಸಾಧನೆಯನ್ನು ಸಾಧಿಸಿದ ಶಿಷ್ಯನು, ಮೂರು ಲೋಕವನ್ನು ಅಥವಾ ಸಕಲ ಜೀವಾತ್ಮರುಗಳನ್ನು ಆವರಿಸಿದ ನಾನು, ನನ್ನದು,ನನಗಾಗಿ ಎಂಬ ಮಾಯಾ ಬಲೆಯನ್ನು ಕಿತ್ತೊಗೆದೆನೆಂದು ಅತೀ ಧೈರ್ಯದಿಂದ ಹೇಳುತ್ತಿದ್ದಾನೆ ಜಗನ್ಮಾತೆ ಅಕ್ಕಮಹಾದೇವಿಯವರ ರೂಪದಲ್ಲಿ. ಇದು ಸಾಧಕರಿಗೆ ಅತೀ ಮಹತ್ವವಾದ ಸಂದೇಶ ಹಾಗು ಎಚ್ಚರಿಕೆಯ ಘಂಟೆ ಇದ್ದ ಹಾಗೆ.

37. ನಡೆವೆನು ಲಿಂಗದ ಕೂಡೆ ನುಡಿವೆನು ಲಿಂಗದವೊಡನೆ
ಎಡವಿಡದೆ ಬಪ್ಪ ವಿಷಯ। ಭೋಗಂಗಳ
ಕೊಡುವೆನು ಲಿಂಗ ಮುಖಗಳಿಗೆ॥

ಇಷ್ಟಲಿಂಗವನ್ನು ಒಂದು ಕ್ಷಣವೂ ಅಗಲದೆ ಧರಿಸಿಕೊಂಡು ನನ್ನ ಜೀವನವನ್ನು ನಡೆಸುವೆನು. ಇಷ್ಟಲಿಂಗವನ್ನು ಪ್ರಾಣವಾಗಿ ಆರಾಧಿಸಿ , ಪ್ರಾಣವನ್ನು ಲಿಂಗ-ದೇವವನ್ನಾಗಿಸುವೆನು. ನಾನು ಮಾತನಾಡಿದರೂ ದೈವೀ ಕಾರುಣ್ಯವನ್ನು ಹೊಂದಿ ಮಾತನಾಡುವೆ ಎಂಬುದಕ್ಕೆ

"ಕೆರೆ ಹಳ್ಳ ಭಾವಿಗಳು ಮೈದೆಗೆದರೆ ಗೊರಚೆ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆಗೆದರೆ ಮುತ್ತು ರತ್ನಂಗಳ ಕಾಣಬಹುದು.
ಲಿಂಗದೇವನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು""

ಈ ವಚನವೇ ಸಾಕ್ಷಿ. ಪ್ರಾರಬ್ಧಕರ್ಮಕ್ಕನುಸಾರವಾಗಿ ಕಣ್ಣು, ಕಿವಿ, ಮೂಗು, ನಾಲಿಗೆ. ಚರ್ಮ ಎಂಬ ಪಂಚ ಜ್ಞಾನೇಂದ್ರಿಯಗಳಿಗೆ ಶಬ್ದ, ಸ್ಪರ್ಶ, ರೂಪ, ರಸ. ಗಂಧವೆಂಬ ಪಂಚ ವಿಷಯಗಳು ಕ್ಷಣಕ್ಷಣಕ್ಕೆ ಉಪಭೋಗಿಸುವ ಸುಖ ದುಃಖಗಳನ್ನು, ಮನ, ಬುದ್ಧಿ, ಚಿತ್ತ, ಅಹಂಕಾರಗಳೆಂಬ ಅಂತಃಕರಣಗಳಿಗೆ ಒದಗುವ ದ್ವಂದ್ವಗಳ ವಿಷಯಗಳನ್ನು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ,ಮಹಾಲಿಂಗಗಳಿಗೆ ಸಮರ್ಪಿಸಿ ಪ್ರಸಾದರೂಪದಲ್ಲಿ ಭೋಗಿಸುವೆನೆಂದು ಮಹಾದೇವಿಯಕ್ಕನವರು ಹೇಳುತ್ತಿದ್ದಾರೆ. ಯಾವುದೇ ವಿಷಯವಿರಲಿ ಅದನ್ನು ದೈವೀಕರಣಗೊಳಿಸುವುದೆಂದರೆ ಸದಾ ಅರಿವಿನ ಜಾಗೃತಿಯಲ್ಲಿದ್ದರೆ ಮಾತ್ರ ಸಾಧ್ಯ.

(ಮುಂದುವರಿಯುವುದು..)

ಶರಣ ವಾಣಿ

ದೊರೆಕೊಂಡಂತೆ ಮನ ದಣಿದಿಪ್ಪವರ
ದುಃಖಕ್ಕೆ ದೂರಾಗಿಪ್ಪವರ
ಒಳಗನರಿದು ಹೊರಗೆ ಮರೆದಿಪ್ಪವರ
ಸದಾನಂದದಲ್ಲಿ ಸುಖಿಯಾಗಿಪ್ಪವರ ಎನಗೊಮ್ಮೆ ತೋರಾ.
ಸಕಳೇಶ್ವರ ದೇವಾ, ಎನಗಿದೇ ವರವನೀವುದು ಕಂಡೆಯಾ ತಂದೆ

ತಟ್ಟೆ -ಬಟ್ಟಲು-ಲೋಟ ದಾನಿಗಳಲ್ಲಿ ಮನವಿ

ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳವು ಜ್ಞಾನ ದಾಸೋಹ ಮತ್ತು ಅನ್ನದಾಸೋಹಕ್ಕೆ ಪ್ರಖ್ಯಾತಿಯನ್ನು ಪಡೆದಿದೆ. ಪ್ರಸಾದ ದಾಸೋಹಕ್ಕೆ ಎಲೆ ನಮ್ಮ ಧರ್ಮದ ಪ್ರಕಾರ ಸೂಕ್ತವಲ್ಲವೆಂದು ಸಾವಿರಾರು ಜನರು ಪಂಕ್ತಿಯಲ್ಲಿ ಕುಳಿತರೂ ಎಲ್ಲರಿಗೂ ತಟ್ಟೆಯಲ್ಲೇ ಎಡೆಮಾಡಲಾಗುವುದು. ಬಹಳ ವರ್ಷಗಳ ಹಿಂದೆ ಮನವಿ ಮಾಡಿದಾಗ ಸಾವಿರಾರು ತಟ್ಟೆಗಳನ್ನು ದಾನಿಗಳು ತಂದು ಕೊಟ್ಟರು. ಕೆಲವು ತಟ್ಟೆಗಳು ಮುರಿದಿವೆ; ಕೆಲವು ತುಕ್ಕು ಹಿಡಿದಿವೆ. ಈಗ ಪುನಃ ಅವುಗಳ ಸಂಖ್ಯೆ ವೃದ್ಧಿಸಬೇಕಾಗಿದೆ. ಉತ್ತಮ ದರ್ಜೆಯ, ಕಂಠ ಇರುವ ಸ್ಟೀಲ್‌ತಟ್ಟೆ (12" ಅಗಲ)ಯ ಬೆಲೆ 80 ರಿಂದ 90 ರೂವರೆಗೆ ಆಗುವುದು.

ಎರಡನೆಯದಾಗಿ ಬಟ್ಟಲು ಬೇಕಾಗಿವೆ. ಶರಣ ಮೇಳದ ಐದೂ ದಿನ ಸಿಹಿಯನ್ನು ಕೊಡಲಾಗುವುದು. ಪಾಯಸ, ಗೋಧಿ ಹುಗ್ಗಿ ಮಾಡಿದಾಗ ಇವು ಅನ್ನ ಸಾರಿನ ಜೊತೆ ಸೇರಿಕೊಂಡು ಬಿಡುತ್ತವೆ. ಸಿಹಿಯನ್ನು ಎಡೆ ಮಾಡಲು 10,000(ಹತ್ತು ಸಾವಿರ) ಬಟ್ಟಲುಗಳನ್ನು ಸಂಗ್ರಹಿಸುವ ಯೋಜನೆ ರೂಪಿಸಲಾಗಿದೆ. ಬೆಳಗಾವಿಯ ಸ್ಟೀಲ್ ಫ್ಯಾಕ್ಟರಿಯಲ್ಲಿ ವಿಚಾರಿಸಿದಾಗ ಒಂದು ಬಟ್ಟಲಿಗೆ 10ರಿಂದ 12ರೂ ಬೀಳುವ ಸಾಧ್ಯತೆ ಉಂಟೆಂದಿದ್ದಾರೆ. ಯಾರಾದರೂ ದಾನಿಗಳು ಒಂದು ಲಕ್ಷ ರೂ ಕೊಟ್ಟರೆ ಅವರ ದೇಣಿಗೆಯಿಂದಲೇ ಎಲ್ಲ ಬಟ್ಟಲು ಖರೀದಿಸಲಾಗುವುದು.

ಮೂರನೆಯದಾಗಿ ಟೀ ಕುಡಿಯುವ ಚಿಕ್ಕಲೋಟ ಬೇಕಾಗಿವೆ. ಅವುಗಳ ಬೆಲೆ ಒಂದಕ್ಕೆ 6 ರೂ ಆಗಬಹುದು.

ಶರಣ ಬಂಧುಗಳು ಶರಣ ಮೇಳಕ್ಕೆ ಬರುವಾಗ ತಮ್ಮ ಶಕ್ತ್ಯಾನುಸಾರ ತಗೊಂಡು ಬಂದು ಸಲ್ಲಿಸಿರಿ. ತಟ್ಟೆ-ಲೋಟ-ಬಟ್ಟಲು ಒಂದೇ ರೀತಿ ಇರಲಿ ಎನ್ನುವವರು ಹಣವನ್ನು ಬ್ಯಾಂಕ್ ಮೂಲಕ ಕಳಿಸಿ, ಫೋನ್ ಮೂಲಕ ತಿಳಿಸಬೇಕು.

Sharana Mela Utsava Samithi, SB A/c 10818354899
State Bank of India ದ IFSC Code ಕೋಡ್ SBIN0007172

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ. ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ. ಸಂಪರ್ಕಿಸುವ ದೂರವಾಣಿ: 9945806297 ಬ್ಯಾಂಕಿನ ಮೂಲಕ ವರ್ಗಾವಣೆ ಮಾಡಬೇಕು ಎನ್ನುವವರಿಗೆ ವಿವರವು ಹೀಗಿದೆ:

Viswakalyana Mission Charitable Trust
Bank of India, Rajajinagar, Bangalore-560010

S.B.A/c.840610100016409

IFSC Code: BKID0008406

ಬಸವ ಧರ್ಮದ ಮಾರ್ಟಿನ್ ಲೂಥರ್
ಪೂಜ್ಯ ಲಿಂಗಾನಂದರು

ಕ್ರೈಸ್ತಧರ್ಮ ಹುಟ್ಟಿ ಒಂದು ಸಾವಿರದ ಐದು ನೂರು ವರ್ಷದಷ್ಟೊತ್ತಿಗೆ ಆ ಧರ್ಮದ ಧರ್ಮಗುರುಗಳು ಲೌಕಿಕಾಸಕ್ತರಾದರು. ಬೈಬಲ್ಲನ್ನು ಧಿಃಕ್ಕರಿಸಿ ನಡೆಯಲು ಪ್ರಾರಂಭಿಸಿದರು. ಧರ್ಮದ ಆಚಾರ, ವಿಚಾರಗಳನ್ನು ಗಂಭೀರವಾಗಿ ಪರಿಗಣಿಸದೆ, ಸ್ವಂತಕ್ಕೆ ತಮ್ಮ ಸಂಸಾರಕ್ಕೆ ಆಸ್ತಿ, ಸಂಪತ್ತನ್ನು ಮಾಡಿಕೊಂಡು ಐಶಾರಾಮಿ ಜೀವನ ನಡೆಸಲು ಪ್ರಾರಂಭಿಸಿದರು. ಅದನ್ನು ಕಂಡು ಪ್ರಜ್ಞಾವಂತ ಕ್ರೈಸ್ತ ಅನುಯಾಯಿಗಳು ನೊಂದುಕೊಂಡರು. ಕೆಲವರು ಇದನ್ನು ವಿರೋಧಿಸಿದರು.ಮತ್ತೆ ಕೆಲವರು ಪ್ರತಿಭಟಿಸಿದರು. ಹಾಗೆ ಪ್ರತಿಭಟಿಸಿದವರಲ್ಲಿ ಅಗ್ರಗಣ್ಯರು ಜರ್ಮನಿಯ ಮಾರ್ಟಿನ್ ಲೂಥರ್. ಅವರು ಗುಟೆನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.ಅವರು ಬೈಬಲ್ಲನ್ನುಅಮೂಲಾಗ್ರವಾಗಿ ಅಧ್ಯಯನ ಮಾಡಿದ್ದರು. ಗುಟೆನ್ ಬರ್ಗ್ ಪ್ರಮುಖ ಚರ್ಚ್‌ನ ಗೋಡೆಯ ಮೇಲೆ ಪಾದ್ರಿಗಳ ಮತ್ತು ಪೋಪರ ನಡಾವಳಿಗಳ ಬಗ್ಗೆ 95 ಆಕ್ಷೇಪಣೆಗಳನ್ನು ಪ್ರಕಟಿಸಿದರು. ಒಂದು ದೊಡ್ಡ ಚಳುವಳಿಯೇ ಪ್ರಾರಂಭವಾಯಿತು. ಹೀಗೆ ಪ್ರಾಟೆಸ್ಟೆಂಟಿಸಂ ಆಯಿತು. ಕ್ರೈಸ್ತಧರ್ಮದಲ್ಲಿ ಸುಧಾರಣೆಯಾಯಿತು. ಅವರ ಘೋಷಣೆ **"Go Back to Bible"** ಎಂದಾಯಿತು. ಕ್ಯಾಥೋಲಿಕ್‌ನಲ್ಲಿಯೂ ಕ್ರೈಸ್ತ ಗುರುಗಳೆಲ್ಲರೂ ಏಸುವಿನ ಸಂದೇಶ ಸಾರುವ ಬೈಬಲ್ ಕಡೆ ಗಮನಹರಿಸಿ ತಮ್ಮ ತಪ್ಪನ್ನು ತಿದ್ದಿಕೊಂಡರು.

ಹಾಗೆಯೇ 12ನೇ ಶತಮಾನದಲ್ಲಿ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಲಿಂಗಾಯತ ಧರ್ಮ 20ನೇ ಶತಮಾನದ ಕಾಲಕ್ಕೆ 15ನೇ ಶತಮಾನದ ಕ್ರೈಸ್ತ ಧರ್ಮದ ಪರಿಸ್ಥಿತಿಯಂತೆ ಆಯಿತು. ಅಂದರೆ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಮಲಿನಗೊಂಡಿತು. ಅದರ ಅಮೂಲಾಗ್ರ ಬದಲಾವಣೆಗೆ ಕಾಯಕಲ್ಪಬೇಕಾಗಿತ್ತು. ಅದನ್ನು ನಿರ್ವಹಿಸಲು ಒಬ್ಬ ಸಮರ್ಥ ವ್ಯಕ್ತಿ ಒಂದು ಶಕ್ತಿಯ ಆವಶ್ಯಕತೆ ಇತ್ತು. ಆ ಶಕ್ತಿಯೇ ಪರಮ ಪೂಜ್ಯ ಸದ್ಗುರು ಲಿಂಗಾನಂದರ ರೂಪುತಳೆದು ಧರೆಗಿಳಿದು ಆ ಪವಿತ್ರ ಕೆಲಸವನ್ನು ಕೈಗೆತ್ತಿಕೊಂಡಿತು.

ಪೂ.ಸದ್ಗುರು ಲಿಂಗಾನಂದರು ಪ್ರವಚನ ಪಿತಾಮಹ ಎಂದು ಕರೆಯಲ್ಪಟ್ಟರು. ಅವರು ದಾರಿತಪ್ಪಿದ್ದ ಮಠ ಪೀಠಾಧೀಶರನ್ನು ಕಂಡು ಮರುಗಿದರು. ಲಿಂಗಾಯತ ಧರ್ಮದ ಆಚಾರ ವಿಚಾರಗಳನ್ನು ಧಿಕ್ಕರಿಸಿ ನಡೆಯುತ್ತಿದ್ದ ಗುರುಗಳನ್ನು ಎಚ್ಚರಗೊಳಿಸುವ ಕೆಲಸವನ್ನು ಮಾಡಬೇಕಾಗಿದ್ದಿತ್ತು, ವಚನ ಸಾಹಿತ್ಯವನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿದ್ದ ಲಿಂಗಾನಂದರು **"Go back to Vachana literature"** ಲಿಂಗಾಯತ ಧರ್ಮದ ಆಚಾರ ವಿಚಾರಗಳನ್ನು ತಿಳಿಯಲು ಶರಣರ ವಚನ ಸಾಹಿತ್ಯವನ್ನುಅಧ್ಯಯನ ಮಾಡಿ ಎಂದು ಗುಡುಗಿದರು. ನಿಜ ತತ್ವ ಸಿದ್ಧಾಂತಗಳನ್ನು ಎತ್ತಿ ಹಿಡಿದರು. ಹಳ್ಳಿಗೆ ಏಕರಾತ್ರಿಯಂತೆ ಪಟ್ಟಣಕ್ಕೆ ಪಂಚರಾತ್ರಿಯಂತೆ ನಾಡಿನಾದ್ಯಂತ ಸಂಚಾರ ಮಾಡಿದರು. ಕಾಲ್ನಡಿಗೆಯಲ್ಲಿ ನೂರಾರು ಹಳ್ಳಿಗಳಿಗೆ ಹೋಗಿ ಪ್ರವಚನ ನೀಡಿದರು. ಪ್ರವಚನವೆಂಬ ಹೊಸ ವಿಧಾನವನ್ನೇ ಧರ್ಮ ಪ್ರಚಾರಕ್ಕೆ ಅಳವಡಿಸಿದರು.

ಲಿಂಗಾನಂದರು ಧಾರ್ಮಿಕ ಜಗತ್ತಿಗೆ ಬರುವತನಕ ಲಿಂಗಾಯತರಿಗೆ ತಮ್ಮ ಧರ್ಮ ಗುರು ಯಾರೆಂದು, ಧರ್ಮ ಸಂಹಿತೆ ಯಾವುದೆಂದು, ಧರ್ಮಕ್ಷೇತ್ರಯಾವುದೆಂದು ತಿಳಿದಿರಲಿಲ್ಲ. ಲಿಂಗಾಯತ ಧರ್ಮಕ್ಕೆ ಧರ್ಮಗುರು ಬಸವೇಶ್ವರರು ಎಂದು ಘಂಟಾಘೋಷವಾಗಿ ಸಾರಿದರು. ಜನಜಾಗೃತಿ ಮಾಡಿದರು. ಈ ಹಿಂದೆ ಬಸವಣ್ಣನ ಬಗ್ಗೆ ತಪ್ಪುಗ್ರಹಿಕೆ ಉಂಟಾಗಿತ್ತು. ಅದು ನಾಲ್ಕು ಕಾಲು ಎರಡು ಕೊಂಬು ಒಂದು ಬಾಲದ ಪ್ರಾಣಿ (ನಂದಿ)ಎಂದು ಬಿಂಬಿಸಲ್ಪಟ್ಟಿತ್ತು.ಅದು ಕೇವಲ ಹೊಲದಲ್ಲಿ ದುಡಿಯುವ ಎತ್ತು ಎನ್ನಲಾಗಿತ್ತು. ಬಸವಣ್ಣ ಎಂದರೆ ಸಮಾಜವನ್ನೇ ಎತ್ತುವ ಗುರು ಎಂದು ತಿಳಿದಿರಲಿಲ್ಲ. ಹೀಗೆ ಧಾರ್ಮಿಕ ಜ್ಞಾನಧಾರೆ ನೀಡಿ ಜನಜಾಗ್ರತಿ ಮಾಡಿದರು.

ಭುವನದ ಭಾಗ್ಯ ಬಸವಣ್ಣ ಬಸವಣ್ಣನ ಭಾಗ್ಯ ಲಿಂಗಾನಂದರು ಬಸವಣ್ಣನಿಗೆ ಗುರುತ್ವಕೊಟ್ಟು ಬಸವಣ್ಣನವರನ್ನು ಅರ್ಥೈಸಿದರು. ವಚನದ ರುಚಿ ಹಚ್ಚಿದರು. ಪುರಾಣಕೀರ್ತನೆಯ ಪ್ರಿಯರಾಗಿದ್ದ ಮಠಾಧೀಶರನ್ನು ಪ್ರವಚನ ಪ್ರಿಯರನ್ನಾಗಿಸಿದರು. 20ನೇ ಶತಮಾನದಲ್ಲಿ ಲಿಂಗಾಯತ ಧರ್ಮದಲ್ಲಿ ಕ್ರಾಂತಿಯನ್ನುಂಟು ಮಾಡಿದರು. ಅದಕ್ಕೆ ಅವರನ್ನು" ಲಿಂಗಾಯತ ಧರ್ಮದ ಮಾರ್ಟಿನ್ ಲೂಥರ್" ಎಂದು ಕರೆಯಬಹುದು. ಧರ್ಮವನ್ನು ಹೀಗೆ ಅರ್ಥೈಸಿ ಮನವರಿಕೆ ಮಾಡಿದರು. ಧರ್ಮ ಮೂಢಾಚಾರ ಕಂದಾಚಾರಗಳಲ್ಲ; ಅದು ಬದುಕುವ ದಾರಿ, ಬಾಳುವ ಬಗೆ.

ಲಿಂಗಾನಂದರು ತಮ್ಮ ಪ್ರವಚನಗಳ ಮೂಲಕ ಪಂಡಿತ ಪಾಮರರನ್ನು ಆಕರ್ಷಿಸಿದರು. ಅವರು ಪಾರಮಾರ್ಥದ ಬೀಜ ಬಿತ್ತಿ ದಿವ್ಯಜ್ಞಾನದ ಬೆಳೆ ತೆಗೆದರು. ಹೀಗೆ ಮಾಡುವಲ್ಲಿ ಅವರ ಶ್ರಮ ಕಡಿಮೆ ಏನಲ್ಲ. ಪಟ್ಟಭದ್ರರ ವಿರೋಧವನ್ನು ಎದುರಿಸಿದರು. ಕೆಲವೆಡೆ ಪ್ರವಚನ ಕಾರ್ಯಕ್ರಮವನ್ನು ಕೆಡಿಸಲುಕಲ್ಲು ತೂರಿದರೂ ಜಗ್ಗಲಿಲ್ಲ. ತಾನು ಹಿಡಿದ ಕೆಲಸವನ್ನು ಮುಂದುವರೆಸಿದರು.

ಲಿಂಗಾನಂದರು ನಿಲ್ಲದೆ ನಿರಂತರ ಧರ್ಮ ಪ್ರಚಾರ ಮಾಡಿದರು. ಅವರು" **Moving Monk**" ಚಲಿಸುವ ಜ್ಞಾನದೇಗುಲ, ನಡೆಯುವ ನುಡಿಯುವ ಲಿಂಗವಾದರು. ಜಂಗಮತತ್ವವನ್ನು ಅರ್ಥೈಸಿದರು. ಹರಿವ ನದಿಯಂತೆ ಸಂಚರಿಸಿ ಜ್ಞಾನಗಂಗೆಯನ್ನು ಹರಿಸಿ ಮುಮುಕ್ಷುಗಳ ಜ್ಞಾನದಾಹವನ್ನು ಇಂಗಿಸಿದರು. ಉರಿವ ಜ್ಯೋತಿಯಂತೆ ಜ್ಞಾನ ಪ್ರಕಾಶವನ್ನು ಬೀರಿದರು. ಸುಡುವ ಊದಿನ ಕಡ್ಡಿಯಂತೆ ಸದ್ಭಾವದ ಪರಿಮಳ ಬೀರಿದರು. ಅವರ ಬಗ್ಗೆ ಪೂಜ್ಯ ಶ್ರೀ ಡಾ॥ ಮಹಾಜಗದ್ಗುರು ಮಾತೆ ಮಹಾದೇವಿ ಬಸವ ಧರ್ಮ ಪೀಠ, ಇವರು ಹೀಗೆ ಹೇಳಿದ್ದಾರೆ.

ಅಡಿಯನಿಟ್ಟು ನಡೆದಲ್ಲೆಲ್ಲ ದೀಪ ಹಚ್ಚಿ ಬಂದಿರಿ,
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ,
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ,
ಸಚ್ಚಿದಾನಂದನ ಶು[illegible]ರಕ್ಷೆಯು ತಮಗಿದೆ.

ಅವರು ಪ್ರಾರಂಭಿಸಿದ ಚಳುವಳಿಯನ್ನು ಮುಂದುವರಿಸಲು ಪ್ರವಚನಕಾರರ ಪಡೆಯನ್ನೇ ಕಟ್ಟಿದರು. ಲಿಂಗಾನಂದರು ಮಾಡಿದ್ದು ವಚನೋಪದೇಶವನ್ನಲ್ಲ ವರ್ತನೋಪದೇಶವನ್ನು ಲಕ್ಷ ಲಕ್ಷ ಭಕ್ತರನ್ನು ತನ್ನತ್ತ ಸೆಳೆದರು. ಇವರನ್ನುಯುಗ ಪುರುಷರೆಂದು ಕರೆಯಬಹುದು. ಬಸವಣ್ಣನವರಿಗೆ ಗುರುತ್ವ ಕೊಟ್ಟ ಮಹಾನ್‌ಗುರು. ಇವರದು ಅಸಾಮಾನ್ಯ ವ್ಯಕ್ತಿತ್ವ ಶರಣರನ್ನು ಮರಣದಲ್ಲಿ ನೋಡು ಎಂಬಂತೆ ನಗುನಗುತ್ತಾ 30–06–1995 ರಂದು ಲಿಂಗೈಕ್ಯರಾದರು.

ಈ ಲಿಂಗಾನಂದರು ಯಾರು?

ಇವರು ಬಿಜಾಪುರದ ಸಮೀಪದ ಮಣಿಗವಳ್ಳಿಯಲ್ಲಿ 15–9–1931ರಂದ್ಲು ಜನಿಸಿದರು. ತಂದೆ ಮಲ್ಲಪ್ಪಕಪ್ಪರದ ತಾಯಿ ಕಲ್ಲಮ್ಮಕಪ್ಪರದ. ಅವರು ಮಗನಿಗೆ ಕರೆದ ಹೆಸರು ಸಂಗಮೇಶ. ಬಡ ವರ್ತಕರ ಕುಟುಂಬದಲ್ಲಿ ಹುಟ್ಟಿ ಬೆಳೆದರು. ಪ್ರಾರಂಭದ ಶಿಕ್ಷಣ ವಿಜಾಪುರ, ಬಾಗಲಕೋಟೆಯಲ್ಲಿ ನಡೆಯಿತು. ಬೆಳಗಾವಿಯ ಲಿಂಗರಾಜು ಕಾಲೇಜಿನಲ್ಲಿ ಪದವಿ, ಉನ್ನತ ಶಿಕ್ಷಣ ಧಾರವಾಡದಲ್ಲಿ ನಡೆಯಿತು. 1955ರಲ್ಲಿ ಬಿ.ಎ.ಆನರ್ಸ್ ಉತ್ತೀರ್ಣರಾದರು ಸ್ವಸಾಮರ್ಥ್ಯದಿಂದ ವಿದ್ಯಾರ್ಥಿವೇತನ ಪಡೆದು ಉನ್ನತ ಶಿಕ್ಷಣಕ್ಕೆ ಸೇರಿದರು. ಪದವಿ ತರಗತಿಯಲ್ಲಿದ್ದಾಗ ಸಮಾಜದಲ್ಲಿನ ಕಷ್ಟಕಾರ್ಪಣ್ಯಗಳು ಅಸಮಾನತೆ ಇವೆಲ್ಲವುಗಳನ್ನು ನೋಡಿ ನಾಸ್ತಿಕರಾಗಿದ್ದು ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತರಾಗಿ ಆ ಪಾರ್ಟಿಯ ಮುಂದಾಳುಗಳಿಗೆ ಬೆಂಬಲಿಗನಾಗಿದ್ದನು ಸಂಗಮೇಶ. ಪದವಿ ಓದುತ್ತಿದ್ದಾಗ ಉತ್ಸಾಹಿ ತರುಣ ಚೈತನ್ಯದ ಪ್ರತಿರೂಪ, ಕ್ರೀಡಾಪಟು ಒಳ್ಳೆಯ ಈಜುಗಾರ, ಮೇಧಾವಿ ವಿದ್ಯಾರ್ಥಿ, ಪ್ರತಿಭಾವಂತ ತರುಣ ಸಂಗಮೇಶನ ಭವಿಷ್ಯವನ್ನು ಉಜ್ವಲಗೊಳಿಸಲು ಹಲವು ಶ್ರೀಮಂತ ಕನ್ಯಾಪಿತೃಗಳು ಮುಂದೆ

ಬಂದರು. ಆದರೆ ಸ್ವಾಭಿಮಾನಿ ಯುವಕ ಬೇರೆಯವರ ಋಣದಲ್ಲಿ ಸಿಲುಕಬಾರದೆಂಬ ಛಲದಿಂದ ಸ್ವತಂತ್ರವಾಗಿ ಮುಂದುವರೆದರು.ಉತ್ಕಟವಾದ ನಾಸ್ತಿಕವಾದದಲ್ಲೇ ಮುಳುಗಿದ್ದ ಸಂಗಮೇಶನಿಗೆ ಬೆಳಗಾವಿಯ ಲಿಂಗಾರಾಜ ಕಾಲೇಜಿನಲ್ಲಿ ಪದವಿಗಾಗಿ ಓದುತ್ತಿದ್ದಾಗ ತತ್ವಶಾಸ್ತ್ರದ ಪ್ರಾಧ್ಯಾಪಕರಾದ ರಾಜಗೋಪಾಲರ ಅಧ್ಯಾತ್ಮವಾದಕ್ಕೆ ವಾಲಿದರು. ಅಂತಿಮ ಬಿ.ಎ ತರಗತಿಯಲ್ಲಿ ಧಾರ್ಮಿಕ ವಿಷಯಗಳ ಆಳವಾದ ಅಧ್ಯಯನ, ಚಿಂತನೆಯ ಫಲವಾಗಿ ಸಾಮ್ಯವಾದದ ಭೂಮಿಕೆಯಲ್ಲಿ ಧಾರ್ಮಿಕ ಮೌಲ್ಯಗಳ ತಳಹದಿಯ ಮೇಲೆ ಕ್ರಾಂತಿ ಮಾಡಿದ್ದ ಬಸವಣ್ಣನವರ ಬಗ್ಗೆ ಕುತೂಹಲ ಮೂಡಿತು. ತನ್ನ ಕೋಣೆಯ ಗೋಡೆಯ ಮೇಲೆ ಸಾಮ್ಯವಾದಿ ಕಾರ್ಲ್‌ಮಾರ್ಕ್ಸ್‌ನ ಭಾವಚಿತ್ರ ತೂಗಾಡುತ್ತಿದ್ದ ಜಾಗದಲ್ಲಿ ಬಸವಣ್ಣನವರ ಭಾವಚಿತ್ರ ರಾರಾಜಿಸಿತು.

ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ತಂದೆತಾಯಿಯರು ತಮ್ಮ ಮಗನ ಮದುವೆಯ ವರದಕ್ಷಿಣೆಯ ಹಣಕ್ಕಾಗಿ ಆಸೆಗಣ್ಣಿನಿಂದ ಕಾಯುತ್ತಿದ್ದರು.ಆದರೆ ಸಂಗಮೇಶ ಸಂಸಾರದ ಪಂಕದಲ್ಲಿ ಸಿಲುಕಲು ಸಿದ್ಧರಿರಲಿಲ್ಲ. ಏನಾದರೂ ವಿಶಿಷ್ಟವಾದ ಸಾಧನೆಯ ಹಂಬಲ ಹೃದಯದಲ್ಲಿ ಮಿಡಿಯುತ್ತಿತ್ತು. ಪದವಿ ಪರೀಕ್ಷೆ ಮುಗಿದಿತ್ತು. ಮುಂದೇನು?ನೌಕರಿ ಹಿಡಿದು ಸಂಸಾರಿಯಾಗಿ ಸೀಮಿತ ಲೌಕಿಕ ಜೀವನದಲ್ಲಿ ಮುಂದುವರಿಯುವುದೋ, ಇಲ್ಲ ಉದಾತ್ತ ಸಮಾಜವಾದ ಸಿದ್ಧಾಂತದ ಗುರಿ ಮುಟ್ಟುವುದೊ? ಮನಸ್ಸು ಭವಿಷ್ಯದ ಗೊಂದಲದಲ್ಲಿ ಮುಳುಗಿತ್ತು. ಮನಸ್ಸಿನ ತುಂಬೆಲ್ಲಾ ಕತ್ತಲೆ, ಚಿಂತನಾ ಮಗ್ನನಾಗಿ ತನ್ನ ಕೊಠಡಿಯಲ್ಲಿ ಕುಳಿತಿದ್ದ ಸಂಗಮೇಶನಿಗೆ ತಟ್ಟನೆ ಬೆಳಕು ಪ್ರಜ್ವಲಿಸಿತು. ತಲೆ ಎತ್ತಿ ಬಸವಣ್ಣನ ಭಾವಚಿತ್ರದತ್ತ ನೋಡಲು ಪ್ರಸನ್ನ ಮುಖದಲ್ಲಿ ಸ್ಪಷ್ಟಧ್ವನಿ ಆಜ್ಞಾರೂಪದಲ್ಲಿ ಕೇಳಿ ಬಂತು. "ಸಂಗಮೇಶ ನೀನು ನನ್ನ ಸಂದೇಶ ಸಾರಲು ಹುಟ್ಟಿ ಬಂದವನು, ನನ್ನತತ್ವ ಪ್ರಚಾರಕ್ಕೆ ಬರಬೇಕು, ನಿನ್ನನ್ನು ನಾನು ಆಯ್ಕೆ ಮಾಡಿಕೊಳ್ಳ ಬಯಸಿರುವೆ." ಆ ಧ್ವನಿಯನ್ನು ಕೇಳಿ, ಸಂಗಮೇಶ ತತ್ತರಿಸಿದ. ಹೀಗೇಕೆ ಭಯ ಹಿಂದೆ ನಾಸ್ತಿಕನಾಗಿದ್ದವನಿಗೆ, ಧೈರ್ಯತಂದುಕೊಂಡು ಹೇಳಿದ– "ಇಲ್ಲ ನನ್ನ ತಂದೆ ತಾಯಿಗೆ ನನ್ನ ಸಹಾಯ ಬೇಕಾಗಿದೆ. ಅವರು ಬಡತನದಲ್ಲಿ ತೊಳಲಾಡುತ್ತಿದ್ದಾರೆ ಅವರಿಗಾಗಿ ನಾನು ದುಡಿಯಬೇಕು. ಅವರನ್ನು ಸಂಕಷ್ಟದಿಂದ ಪಾರು ಮಾಡಬೇಕು" ಎಂದು ಉತ್ತರಿಸಿದ. ನಾನೂ ನಿನ್ನ ತಂದೆಯೇ, ನನ್ನ ತತ್ವ ಪ್ರಸಾರಕ್ಕಾಗಿ ದುಡಿಯಬೇಕು, ಎಲ್ಲಿ ಮಾತುಕೊಡು ಎಂದು ಆಜ್ಞಾಪಿಸಿತು ಆ ಧ್ವನಿ. ಸಂಗಮೇಶ ಸಾಷ್ಟಾಂಗ ಮಾಡಿ ಮಾತುಕೊಟ್ಟ, ಆ ಬೆಳಕು ಇಲ್ಲವಾಯಿತು.

ಜನ್ಮಕೊಟ್ಟ ತಂದೆ ತಾಯಿಯವರನ್ನು ಧಿಕ್ಕರಿಸಿ ಮಾತುಕೊಟ್ಟೆನಲ್ಲಾ ಎಂದು ಗೊಂದಲದಲ್ಲಿ ಮುಳುಗಿದ ಸಂಗಮೇಶ. ಕೊಠಡಿಯಲ್ಲಿ ಹೆಚ್ಚೊತ್ತು ಕೂರಲಾಗಲಿಲ್ಲ. ಕೊಠಡಿ ಬಿಟ್ಟು ಹೊರಗೆ ನಡೆದು ಒಂದು ಗುಡಿಯ ಹತ್ತಿರ ಬಂದಾಗ ತಿಳಿಯಿತು, ಅದು ಬಸವೇಶ್ವರರಗುಡಿ ಅಲ್ಲಿ ಬಸವ ಜಯಂತಿ ಕಾರ್ಯಕ್ರಮ ನಡೆದಿತ್ತು. ಕಾರ್ಯಕರ್ತರಿಂದ ಅವಕಾಶ ಪಡೆದು ನಿರರ್ಗಳವಾಗಿ ಮಾಡಿದ ಭಾಷಣದಿಂದ ಸಭಿಕರು ಸ್ಥಂಭೀಭೂತರಾದರು.ಬಿ.ಎ. ಪ್ರಥಮದರ್ಜೆಯಲ್ಲಿ ಉತ್ತೀರ್ಣವಾದ ಸಂಗಮೇಶನಿಗೆ ಓದು ಮುಂದುವರಿಸುವಾಸೆ, ಅತ್ತ ಬಸವಣ್ಣನವರಿಗೆ ಕೊಟ್ಟ ಮಾತು ಕಾಡುತ್ತಿತ್ತು. ಮನೆಯವರ ಕಷ್ಟ ನೋಡಿ ನೌಕರಿ ಹಿಡಿಯಲು ಒತ್ತಡ ಬಿಜಾಪುರದ ಸರ್ಕಾರಿ ಶಾಲೆಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದ ನಂತರ ಬಸವಣ್ಣನ ಕರೆಯ ಮೊರೆತ ಹೆಚ್ಚಾಯ್ತು. ತನ್ನಲ್ಲಿದ್ದ ಪುಸ್ತಕ, ಬಟ್ಟೆಗಳನ್ನು ಇತರ ವಸ್ತುಗಳನ್ನು ಸ್ನೇಹಿತರಿಗೆ ಹಂಚಿದರು. ದಿನಾಂಕ 16–11–1956 ರಂದು ಧಾರವಾಡದ ಸಮೀಪದಲ್ಲಿರುವ ಸಣ್ಣಗುಡ್ಡದ ಮೇಲೆ ಧ್ಯಾನಾಸಕ್ತರಾಗಿ ಬಸವಣ್ಣನವರ ಅನುಗ್ರಹಕ್ಕಾಗಿ ಪ್ರಾರ್ಥಿಸಿ ನಂತರ ಜೊತೆಯಲ್ಲಿ ತಂದಿದ್ದ ಕಾವಿ ವಸ್ತ್ರಗಳನ್ನು ಧರಿಸಿ ಜ್ಞಾನ ಸನ್ಯಾಸ ಸ್ವೀಕರಿಸಿದರು.'

ಸಂಗಮೇಶ ಕಾವಿಧರಿಸಿದ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಸ್ನೇಹಿತರೆಲ್ಲಾ ದಿಗ್ಭ್ರಾಂತರಾದರು. ಸಂಗಮೇಶನನ್ನು ಕಳೆದುಕೊಳ್ಳಲು ಇಚ್ಛಿಸಲಿಲ್ಲ. ಅವರೆಲ್ಲಾ ಚಿಂತಾಕ್ರಾಂತರಾಗಿ ಗೆಳೆಯನನ್ನು ತಡೆಯಲು ಪ್ರಶ್ನಿಸಿದರು. ಆದರೆ ಸಂಗಮೇಶ ವಿಚಲಿತನ್ನಾಗದ್ದೆ ಹೀಗ್ಗೆ ಉತ್ತರಿಸಿದರು. "ನಾನು ಲೋಕಕ್ಕೆ ಬಸವ

ಸಂದೇಶ ಸಾರಲು ಹೊರಟಿರುವೆ, ನಾನು ಈಗ ಲಿಂಗಾನಂದ." ಭಾರವಾದ ಹೃದಯದಿಂದ ಅವರೆಲ್ಲರೂ ತಮ್ಮ ಸ್ನೇಹಿತನನ್ನು ಬೀಳ್ಕೊಟ್ಟರು.

ಮಗ ಸನ್ಯಾಸ ಸ್ವೀಕರಿಸಿದ ಸುದ್ದಿ ಕೇಳಿ ತಂದೆಗೆ ಹೃದಯಾಘಾತವಾಯಿತು. ಈ ಆಘಾತದಿಂದ ತಾಯಿ ಲಿಂಗೈಕ್ಯರಾದರು. ಕುಟುಂಬ ಆಸರೆ ಇಲ್ಲದಂತಾಗಿ ಅನಿಶ್ಚಿತತೆಯಲ್ಲಿ ಮುಳುಗಿತು. ಮನೆಯ ಸಂಪರ್ಕದಲ್ಲಿದ್ದಾಗ ಬಡತನದ ವಿರುದ್ಧ ಹೋರಾಡಿದ್ದ ಲಿಂಗಾನಂದರು ಈಗ ಸಂಪ್ರದಾಯವಾದಿಗಳ ವಿರುದ್ಧ ಹೋರಾಡಬೇಕಾಯಿತು. ಧರ್ಮ ಪ್ರಚಾರದಲ್ಲಿ ದಿಟ್ಟತನದಲ್ಲಿ ಮುನ್ನಡೆದರು. ಆ ಗಾಢವಾದ ಜ್ಞಾನ ಸಂಪತ್ತು, ದೃಢ ಮನಸ್ಸಿನ ಬಲದಿಂದ ಪಟ್ಟಭದ್ರರು ಒಡ್ಡಿದ ವಿಘ್ನಗಳನ್ನೆಲ್ಲಾ ನಿವಾರಿಸಿ ಜನಮನಗೆದ್ದರು.

ಅಧಿಕೃತವಾಗಿ ಲಿಂಗಾನಂದರಿಗೆ 7-08-1961ರಲ್ಲಿ ಆಗಿನ ಸುತ್ತೂರು ಜಗದ್ಗುರು ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ವಿಧ್ಯುಕ್ತವಾಗಿ ವಿರಕ್ತ ದೀಕ್ಷೆಕೊಟ್ಟರು. ಲಿಂಗಾನಂದರ ಪ್ರಭಾವದಿಂದ ವೈರಾಗ್ಯಕ್ಷೇತ್ರಕ್ಕೆ ಹಲವು ಯುವ ಚೇತನಗಳು ಪ್ರವೇಶಿಸಿದರು. ಅವರುಗಳಲ್ಲಿ ಪೂ.ಡಾ||ಮಾತೆ ಮಹಾದೇವಿ ತಾಯಿಯವರೂ ಒಬ್ಬರು. ಅವರು ಅಂತರ್ರಾಷ್ಟ್ರೀಯ ಖ್ಯಾತಿಯ ಮಹಿಳಾ ಜಗದ್ಗುರುಗಳು. ಅವರ ಸಾಧನೆ ಅಸಾಧಾರಣವಾದುದು. 1970ರಲ್ಲಿ ಪೂಜ್ಯ ಲಿಂಗಾನಂದರು ಧಾರವಾಡದಲ್ಲಿ ಸ್ತ್ರೀ ಪೀಠ ಸ್ಥಾಪಿಸಿದರು. ಅದರ ಪ್ರಪ್ರಥಮ ಜಗದ್ಗುರುಗಳು ಪೂ.ಮಾತೆ ಮಹಾದೇವಿ ತಾಯಿಯವರು. ಬಸವೇಶ್ವರರು ಮಾಡದೆ ಅರ್ಧಕ್ಕೆ ಬಿಟ್ಟು ಹೋಗಿದ್ದ ಕಾರ್ಯವನ್ನು ಲಿಂಗಾನಂದರು ಪೂರ್ಣ ಮಾಡಿದರು.

1977 ರಲ್ಲಿ ವಿಶ್ವಕಲ್ಯಾಣ ಮಿಷನ್ ಸ್ಥಾಪಿಸಿದರು. ಆ ಮೂಲಕ ಪ್ರವಚನಕಾರರನ್ನು ತಯಾರು ಮಾಡಿದರು.ಅಲ್ಲಲ್ಲೆ ಧಾರ್ಮಿಕ ಶಿಬಿರಗಳನ್ನು ಆಯೋಜಿಸಿ ಆಸಕ್ತ ಭಕ್ತರಿಗೆ ತರಬೇತಿ ನೀಡಿ ಹಲವರನ್ನು ನಿಷ್ಠಾವಂತ ಶರಣರನ್ನಾಗಿ ಪರಿವರ್ತಿಸಿದರು. ಭಕ್ತರಲ್ಲಿ ನಿರಂತರ ಆಧ್ಯಾತ್ಮಿಕತೆಯನ್ನು ಕಾಪಾಡಲು ಗ್ರಾಮ ಮಟ್ಟದಿಂದ ಎಲ್ಲಾ ಹಂತಗಳಲ್ಲಿಯೂ 1980 ರಲ್ಲಿ ರಾಷ್ಟ್ರೀಯ ಬಸವದಳಗಳ ಘಟಕಗಳನ್ನು ಸ್ಥಾಪಿಸುವ ಪರಿಕಲ್ಪನೆಕೊಟ್ಟರು. ಹೀಗೆ ಬಸವ ದಳಗಳು ಬಸವ ಮಂಟಪಗಳಲ್ಲಿ ಅಂದಿನಿಂದಲೂ ಸಾರ್ಥಕವಾಗಿ ಕೆಲಸ ಮಾಡುತ್ತಾ ಬಂದಿವೆ. 1987 ರಲ್ಲಿ ಬಸವಧರ್ಮ ಪೀಠಟ್ರಸ್ಟ್ ಸ್ಥಾಪಿಸಿದರು.1988 ರಲ್ಲಿ ಕೂಡಲ ಸಂಗಮದಲ್ಲಿ ಶರಣಮೇಳ ಜನವರಿಯಲ್ಲಿ ಆಯೋಜಿಸಿದರು. ಪ್ರತಿ ವರ್ಷ ಜನವರಿ 11ರಿಂದ 15ರವರೆಗೆ ಶರಣಮೇಳ ನಡೆಯುತ್ತದೆ.ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಲಕ್ಷಾಂತರ ಶರಣರು ಭಾಗವಹಿಸಿ ನಿಜ ಧಾರ್ಮಿಕ ಜ್ಞಾನವನ್ನು ಪಡೆದು ಪುನೀತರಾಗುತ್ತಿದ್ದಾರೆ.1992ರಲ್ಲಿ ಕೂಡಲ ಸಂಗಮದಲ್ಲಿ ಬಸವಧರ್ಮಪೀಠ ಸ್ಥಾಪಿಸಲ್ಪಟ್ಟು ಲಿಂಗಾನಂದರು ಪ್ರಥಮ ಮಹಾಜಗದ್ಗುರುವಾದರು.

ಹೀಗೆ ಲಿಂಗಾನಂದರು ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಧಾರ್ಮಿಕಕ್ಷೇತ್ರಕ್ಕೆ ಪ್ರವೇಶಿಸಿ ಕನ್ನಡ ನಾಡಿನಲ್ಲಿ ಧರ್ಮಪ್ರಚಾರ ಮಾಡಿದುದಲ್ಲದೆ, ನೆರೆಯ ರಾಜ್ಯಗಳಲ್ಲಿಯೂ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಧರ್ಮ ಪ್ರಚಾರ ಮಾಡಿ ಲಿಂಗಾಯತ ಧರ್ಮದಲ್ಲಿ ಕ್ರಾಂತಿ ಮಾಡಿ ಧಾರ್ಮಿಕ ಇತಿಹಾಸದಲ್ಲಿ ಪ್ರಜ್ವಲಮಾನವಾಗಿ ಬೆಳಗುತ್ತಿದ್ದಾರೆ.

ಬಾಣೂರುಚನ್ನಪ್ಪ,
ಚಿಕ್ಕಮಗಳೂರು-577102
ಜಂಗಮ ವಾಣಿ: 9448817507

ಬೆಂಗಳೂರಿನ ಬಸವ ಸಮಿತಿಯ ಬಸವ ಪಥದಲ್ಲಿ ಈ ಲೇಖನ ಪ್ರಕಟಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು.

ನಿಜಜ್ಞಾನಿಯ ಪರಿ

-ಮಾತೆ ಕಸ್ತೂರಿದೇವಿ

ಆಗಮ ಜ್ಞಾನಿ ಅಜ್ಞಾನಿಯಯ್ಯ
ನಿಯಮ ಜ್ಞಾನಿ ನೀಚದೇಹಿಯಯ್ಯ
ಶೀಲ ಜ್ಞಾನಿ ಸಂಕಲ್ಪದೇಹಿಯಯ್ಯ
ನಿಮ್ಮನರಿದ ಜ್ಞಾನಿ ಏನಾಗುಣವನರಿಯನಯ್ಯ
ಕಪಿಲಸಿದ್ಧ ಮಲ್ಲಿನಾಥಯ್ಯ -ವ.ಸಂ 122
-ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು

ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು ಈ ವಚನದಲ್ಲಿ ತಾವು ಕಂಡ ಅನೇಕ ಬಗೆಯ ಸಾಧಕರಲ್ಲಿ ಸರಿಯಾದ ಮಾರ್ಗದರ್ಶನವಿಲ್ಲದೆ ಪಡೆದ ಜ್ಞಾನದಿಂದ ಸಾಧಕನ ವ್ಯಕ್ತಿತ್ವದಲ್ಲಿ ಉಂಟಾದ ದುಷ್ಪರಿಣಾಮವನ್ನು ಕುರಿತು ಹೇಳಿದ್ದಾರೆ. ಸುಜ್ಞಾನ ಮತ್ತು ಸತ್ಕ್ರಿಯೆ ಒಂದಾಗದ ಜ್ಞಾನವನ್ನು ಶರಣರು ಒಪ್ಪುವುದಿಲ್ಲ. ಅವರ ಪಾಲಿಗೆ ಜ್ಞಾನವೇ ಶಕ್ತಿ ಎಂಬುದು ಹುಸಿಯಾಗಿದೆ ಏಕೆಂದರೆ ಕ್ರಿಯೆಯಿಲ್ಲದ ಜ್ಞಾನ ತನ್ನಿಂದ ತಾನೆ ಶಕ್ತಿಯಾಗಿ ಕೆಲಸ ಮಾಡುವುದಿಲ್ಲ ಎಂಬುದು ಅವರ ಅಭಿಮತ. ಆದ್ದರಿಂದ ಶ್ರೀ ಸಿದ್ಧರಾಮೇಶ್ವರರು ಈ ವಚನದಲ್ಲಿ ಜ್ಞಾನಿಗಳ ದೌರ್ಬಲ್ಯವನ್ನು ಎತ್ತಿ ತೋರಿಸಿದ್ದಾರೆ. ಅಲ್ಲದೆ ಎಲ್ಲಕ್ಕೂ ಮೂಲ ಕಾರಣಕರ್ತನಾದ ಪರಮಾತ್ಮನನ್ನು ಅರಿಯುವುದೇ ನಿಜವಾದ ಜ್ಞಾನ ಎಂದು ಪ್ರತಿಪಾದಿಸುತ್ತಾರೆ.

ಆಗಮ ಜ್ಞಾನಿ ಅಜ್ಞಾನಿಯಯ್ಯ ಎಂದು ಶಾಸ್ತ್ರಜ್ಞರನ್ನು ಜರಿಯುತ್ತಿದ್ದಾರೆ. ಪುರಾಣಾಗಮ ಶಾಸ್ತ್ರ ಗ್ರಂಥಗಳನ್ನು ಅಭ್ಯಾಸ ಮಾಡಿದ ಸಾಧಕನು ಅವುಗಳ ಬಗ್ಗೆ ಚನ್ನಾಗಿ ತಿಳಿದಿರುತ್ತಾನೆ. ಆದರೆ ಈ ಶಾಸ್ತ್ರಾಭ್ಯಾಸದಿಂದ ಅವನಲ್ಲಿ ಸರ್ವಶಕ್ತನೂ, ನಿರಾಕಾರನೂ ಆದ ಪರಮಾತ್ಮನ ನಿಜವಾದ ಅಸ್ತಿತ್ವ ಮತ್ತು ಸ್ವರೂಪದ ಜ್ಞಾನವೊಂದು ಉಳಿದು ಬೇರೆಲ್ಲಾ ವಿಷಯಗಳಲ್ಲಿ ಬಲ್ಲಿದನಾಗಿರುತ್ತಾನೆ. ಈ ಕಾರಣಕ್ಕಾಗಿ ಬಸವಾದಿ ಪ್ರಮಥರ ದೃಷ್ಟಿಯಲ್ಲಿ ಇವನೊಬ್ಬ ಜಡ ಪಂಡಿತನೆನಿಸಿಕೊಳ್ಳಬಲ್ಲನೆ ಹೊರತು ನಿಜಜ್ಞಾನಿ ಎಂದೆನಿಸಿಕೊಳ್ಳಲಾರ. ಈ ಮಾತಿಗೆ ಸಾಕ್ಷಿಯಾಗಿ ಪ್ರವಚನ ಪಿತಾಮಹರೆಂದು ಖ್ಯಾತರಾಗಿದ್ದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಹೇಳುತ್ತಿದ್ದ ದೃಷ್ಟಾಂತವೊಂದು ಈ ಸಂದರ್ಭದಲ್ಲಿ ನೆನಪಾಗುತ್ತಿದೆ.

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಅವನು ತತ್ವ ಜ್ಞಾನ, ಧರ್ಮ, ಅಧ್ಯಾತ್ಮಗಳಲ್ಲಿ ಸದಭಿರುಚಿ ಉಳ್ಳವನಾಗಿದ್ದ. ಆಗಾಗ ತನ್ನ ಆಸ್ಥಾನದಲ್ಲಿ ತತ್ವಜ್ಞಾನಿಗಳ, ಜಿಜ್ಞಾಸುಗಳ, ಮುಮುಕ್ಷುಗಳ ಸಮ್ಮೇಳನಗಳನ್ನು ಕರೆಯುತ್ತಿದ್ದ. ಒಂದು ದಿನ ರಾಜನು ತನ್ನ ಆಸ್ಥಾನದಲ್ಲಿ ಪಂಡಿತರ ಸಭೆ ಸೇರಿದಾಗ ಮೂರು ಪ್ರಶ್ನೆಗಳನ್ನು ಕೇಳುತ್ತಾನೆ. ಅವು ಯಾವುವೆಂದರೆ-

1. ದೇವರು ಎಲ್ಲಿದ್ದಾನೆ ಮತ್ತು ಎಲ್ಲಿ ಪ್ರಕಟವಾಗುತ್ತಾನೆ?
2. ದೇವರು ಯಾವ ಕಡೆ ಮುಖ ಮಾಡಿಕೊಂಡಿರುತ್ತಾನೆ ?
3. ದೇವರು ಏನೇನು ಮಾಡುತ್ತಾನೆ ?

ರಾಜನ ಈ ಮೂರು ಪ್ರಶ್ನೆಗಳಿಗೆ ಯಾರಿಗೂ ಉತ್ತರ ಕೊಡಲು ಬರುವುದಿಲ್ಲ. ಕೊನೆಗೆ ತನ್ನ ಆಸ್ಥಾನದ ಮುಖ್ಯ ಪಂಡಿತನಿಗೆ 15 ದಿನಗಳಲ್ಲಿ ಸೂಕ್ತವಾದ ಉತ್ತರ ಕೊಡಬೇಕೆಂದು ಆಜ್ಞಾಪಿಸುತ್ತಾನೆ. ಸೂಕ್ತವಾದ ಉತ್ತರ ಕೊಟ್ಟಲ್ಲಿ ಹತ್ತುಸಾವಿರ ಬಹುಮಾನವೆಂದು ಉತ್ತರ

ಕೊಡದಿದ್ದಲ್ಲಿ ತಲೆದಂಡವೆಂದು ಘೋಷಿಸುತ್ತಾನೆ. ರಾಜಾಜ್ಞೆಯನ್ನು ಒಪ್ಪಿ ಪಂಡಿತನು ಮನೆಗೆ ಹೋಗುತ್ತಾನೆ.

ಪಂಡಿತನು ಕಾಶಿಯಲ್ಲಿ 12 ವರ್ಷಗಳ ಕಾಲ ಪುರಾಣ, ಆಗಮ, ಶೃತಿ ಮುಂತಾದ ಎಲ್ಲಾ ಗ್ರಂಥಗಳ ಅಭ್ಯಾಸಗಳೊಂದಿಗೆ ವೇದಾಧ್ಯಯನ ಮಾಡಿದ್ದ. ಹೀಗಾಗಿ ಸಾಕಷ್ಟು ಸಂಸ್ಕೃತ ಪದ್ಯ, ಸ್ತೋತ್ರಗಳನ್ನು ರಾಗಬದ್ಧವಾಗಿ ಹಾಡುತ್ತಿದ್ದ. ದಿನವೂ ಶಾಸ್ತ್ರಗಳನ್ನು ಹೇಳುತ್ತಿದ್ದ. ಪ್ರವಚನಗಳನ್ನು ಮಾಡುತ್ತಿದ್ದ. ಅವನ ಮನೆಯಲ್ಲಿ ಒಬ್ಬ ಬಾಲಕ ಕೆಲಸ ಮಾಡಿಕೊಂಡಿದ್ದ. ಅವನು ದಿನಾಲು ಪಂಡಿತನು ಹೇಳುತ್ತಿದ್ದ ಪುರಾಣ ಪ್ರವಚನಗಳನ್ನು ಆಸಕ್ತಿಯಿಂದ ಕೇಳುತ್ತಿದ್ದ. ಪಂಡಿತನು ಹೇಳುತ್ತಿದ್ದ ಪ್ರತಿಯೊಂದು ಆಚಾರ-ವಿಚಾರಗಳನ್ನು ಬಾಲಕನು ತನ್ನ ನಡೆನುಡಿಯಲ್ಲಿ ತಂದು ಅನುಷ್ಠಾನ ಮಾಡುತ್ತಿದ್ದನು. ಹೀಗಾಗಿ ಆ ಬಾಲಕನು ನಿಜವಾದ ಅರ್ಥದಲ್ಲಿ ಲಿಂಗಾನುಭಾವಿಯಾಗಿದ್ದನು. ಆದರೆ ಪಂಡಿತನು ಶಾಸ್ತ್ರಾಭ್ಯಾಸದಿಂದ ಕೇವಲ ಗ್ರಂಥಜ್ಞಾನವನ್ನು ಮಾತ್ರ ಸಂಪಾದಿಸಿದ್ದು, ಅವನ ಜ್ಞಾನವೆಲ್ಲ ಒಣವೇದಾಂತವಾಗಿತ್ತು.

ಅರಮನೆಯಿಂದ ಹಿಂದಿರುಗಿದ ಪಂಡಿತನು ರಾಜನ ಪ್ರಶ್ನೆಗಳಿಗೆ ಉತ್ತರ ಕೊಡಲು ತಾನು ಕಲಿತಿದ್ದ ಸಕಲ ವೇದ, ಪುರಾಣ, ಆಗಮ, ಉಪನಿಷತ್ತು, ಶಾಸ್ತ್ರ ಮುಂತಾದ ಎಲ್ಲಾ ಗ್ರಂಥಗಳನ್ನು ಹಗಲು ರಾತ್ರಿ ಯೆನ್ನದೆ ಪದೇ ಪದೇ ಗಾಢವಾಗಿ ಓದಲು ಪ್ರಾರಂಭಿಸಿದನು. ಉತ್ತರಕ್ಕಾಗಿ ತನ್ನಲಿದ್ದ ದಪ್ಪ ದಪ್ಪ ಪುಸ್ತಕಗಳಲ್ಲಿ ಹುಡುಕಿದನು. ದಿನಗಳು ಹತ್ತಿರ ಬರುತ್ತಿದ್ದಂತೆ ಪಂಡಿತನು ತುಂಬಾ ಚಿಂತಾಕ್ರಾಂತನಾದನು. ಪಂಡಿತನ ಈ ತಳಮಳವನ್ನು ಮನೆಯಲ್ಲಿದ್ದ ಬಾಲಕನು ಸೂಕ್ಷ್ಮವಾಗಿ ಗಮನಿಸುತ್ತಿದ್ದನು. ಊಟ ನಿದ್ರೆಗಳನ್ನು ಮರೆತು ಚಿಂತಾಕ್ರಾಂತನಾಗಿ ಗ್ರಂಥಾವಲೋಕನದಲ್ಲಿ ತೊಡಗಿದ್ದ ಪಂಡಿತನನ್ನು ಒಮ್ಮೆ ಬಾಲಕ ಕೇಳಿದ.

"ಯಜಮಾನರೆ, ತಾವು ಯಾವುದೋ ಸಂಶೋಧನೆ ಮಾಡುತ್ತಿರುವಂತಿದೆ. ಹಗಲಿರುಳು ಚಿಂತಾಕ್ರಾಂತರಾಗಿ ಪುಸ್ತಕಗಳಲ್ಲಿ ಏನೋ ಹುಡುಕುತ್ತಿದ್ದೀರಿ. ನನಗೂ ಹೇಳಿದರೆ ನಾನು ತಮ್ಮ ಸೇವೆ ಮಾಡಲು ಸಿದ್ಧನಿದ್ದೇನೆ." ಎಂದು ನಮ್ರತೆಯಿಂದ ವಿಚಾರಿಸಿದ. ಪಂಡಿತ ಬಾಲಕನಿಗೆ ಹೇಳಿದ 'ರಾಜನು ಮೂರು ಪ್ರಶ್ನೆಗಳನ್ನು ಕೇಳಿದ್ದಾನೆ. ಅವುಗಳಿಗೆ ಉತ್ತರ ಹುಡುಕುತ್ತಿದ್ದೇನೆ. ಇನ್ನೆರಡು ದಿನದಲ್ಲಿ ತಿಳಿಸಬೇಕಾಗಿದೆ. ಸರಿಯಾದ ಉತ್ತರ ಹೇಳಿದರೆ ಹತ್ತು ಸಾವಿರ ಬಹುಮಾನ; ತಪ್ಪಿದರೆ ತಲೆದಂಡವಿದೆ. ಇದು ರಾಜಾಜ್ಞೆ, ಆದ್ದರಿಂದ ಕಾಶಿಯಲ್ಲಿ ಹನ್ನೆರಡು ವರ್ಷ ಕಲಿತ ವಿದ್ಯೆಯನ್ನೆಲ್ಲ ಪ್ರಯೋಗಿಸುತ್ತಿದ್ದೇನೆ. ಆದರೆ ಇನ್ನೂ ಉತ್ತರ ಸಿಕ್ಕಿಲ್ಲ. ಇದರಲ್ಲಿ ನೀನು ಏನು ಸೇವೆ ಮಾಡಬಲ್ಲೆ? ನಾನು ಉತ್ತರಿಸಲಾಗದ ಪ್ರಶ್ನೆಗಳಿಗೆ ನೀನು ಹೇಗೆ ಉತ್ತರಿಸಬಲ್ಲೆ. ನಿನ್ನ ಕೆಲಸ ನೀನು ಮಾಡು ಹೋಗು' ಎಂದು ಕೋಪದಿಂದಲೇ ಹೇಳಿದ. ಬಾಲಕ ಕೊನೆಗೆ ' ಪ್ರಶ್ನೆಗಳಾವುವು ಎಂದಾದರೂ ತಿಳಿಸಿರಿ' ಎಂದು ಒತ್ತಾಯಿಸಿದ ಮೇಲೆ ಮೂರು ಪ್ರಶ್ನೆಗಳನ್ನು ಪಂಡಿತ ಬಾಲಕನಿಗೆ ಹೇಳಿದ.

ಬಾಲಕನು 'ಪಂಡಿತೋತ್ತಮರೇ, ಇವು ಬಹಳ ಸುಲಭವಾದ ಪ್ರಶ್ನೆಗಳು. ಇವುಗಳಿಗೇಕೆ ತಾವು ಇಷ್ಟೊಂದು ತಲೆಕಡಿಸಿಕೊಂಡಿದ್ದೀರೋ ತಿಳಿಯದು. ಈ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ. ತಾವು ನನಗೆ ಅರಮನೆಗೆ ಹೋಗಿ ಉತ್ತರಿಸಲು ಅನುಮತಿ ಕೊಡಬೇಕು.' ಎಂದು ವಿನಂತಿಸಿ ಬಹು ಪ್ರಯಾಸದಿಂದ ಪಂಡಿತನ ಒಪ್ಪಿಗೆ ಪಡೆದು ರಾಜನ ಆಸ್ಥಾನಕ್ಕೆ ಬಂದನು.

ಸಿಂಹಾಸನದ ಮೇಲೆ ಕುಳಿತ್ತಿದ್ದ ರಾಜನಿಗೆ ವಂದಿಸಿ ' ಮಹಾರಾಜ ನಾನು ತಮ್ಮ

ಪಂಡಿತರ ಮನೆಯ ಸೇವಕನು. ತಾವು ಕೇಳಿದ ಮೂರು ಪ್ರಶ್ನೆಗಳಿಗೆ ಉತ್ತರಿಸಲು ಬಂದಿದ್ದೇನೆ. ತಾವು ಪ್ರಶ್ನೆಗಳನ್ನು ಕೇಳಬೇಕು' ಎಂದು ತನ್ನ ಪರಿಚಯದೊಂದಿಗೆ ತಾನು ಬಂದ ಉದ್ದೇಶವನ್ನು ತಿಳಿಸಿದನು.

ಅದಕ್ಕೆ ರಾಜನು 'ನಿಮ್ಮ ಪಂಡಿತರು ಉತ್ತರ ಕೊಡಲು ಅಸಾಧ್ಯವಾದ ಪ್ರಶ್ನೆಗಳಿಗೆ ನೀನು ಹೇಗೆ ಉತ್ತರ ಕೊಡಬಲ್ಲೆ ?' ಎಂದು ಕೇಳಿದಾಗ ಬಾಲಕನು ಚಾಣಾಕ್ಷತನದಿಂದ ಹೀಗೆ ಹೇಳುತ್ತಾನೆ 'ಇವು ಬಹಳ ಸುಲಭವಾದ ಪ್ರಶ್ನೆಗಳು. ನಮ್ಮ ಶಾಸ್ತ್ರಿಗಳ ಆವಶ್ಯಕತೆ ಇಲ್ಲ. ನಾನೇ ಉತ್ತರಿಸುವೆ. ತಾವು ಒಂದೊಂದಾಗಿ ಪ್ರಶ್ನೆಗಳನ್ನು ಕೇಳಬೇಕು' ಎಂದು ಆತ್ಮವಿಶ್ವಾಸದಿಂದಲೇ ಹೇಳಿದನು.

ಅಂತೆಯೆ ರಾಜನು ಸಿಂಹಾಸನದ ಮೇಲೆ ಕುಳಿತು ' ಹಾಗಾದರೆ ಹೇಳು! ದೇವರು ಎಲ್ಲಿದ್ದಾನೆ?' ಎಂದು ಮೊದಲ ಪ್ರಶ್ನೆಯನ್ನು ಕೇಳಿದನು. ಆಗ ಬಾಲಕ ಹೇಳುತ್ತಾನೆ ' ಹೇಳುವವರು ಮೇಲೆ ಕೂಡಬೇಕು; ಕೇಳುವವರು ಕೆಳಗೆ ಕೂಡಬೇಕು. ಏಕೆಂದರೆ ಹೇಳುವವನು ಗುರು; ಕೇಳುವವನು ಶಿಷ್ಯ! ಹಸುವಿನ ಕೆಳಗೆ ಕೆಚ್ಚಲಿನ ಬಳಿ ಕುಳಿತು ಹಾಲು ಹಿಂಡಿದರೆ ತಾನೆ ಹಸು ಹಾಲು ಕೊಡುವುದು. ಬದಲಿಗೆ ಅಧಿಕಾರದ ದರ್ಪ ಅಥವ ಜಂಭದಿಂದ ಹಸುವಿನ ಬೆನ್ನಿನ ಮೇಲೆ ಕುಳಿತರೆ ಹಾಲು ಕೊಡುವುದೆ? ಇಲ್ಲವಷ್ಟೆ. ಅದೇ ರೀತಿ ಜಿಜ್ಞಾಸುವಾದ ಶಿಷ್ಯನು ಗುರುವಿನ ಪಾದದ ಬಳಿ ಕುಳಿತು ಕಿಂಕರನಾಗಿ ಪ್ರಶ್ನಿಸಿದರೆ ಗುರು ತನ್ನ ಜ್ಞಾನವೆಂಬ ಅಮೃತವನ್ನು ಧಾರೈಸುವನು. ಇಲ್ಲದಿದ್ದರೆ ಜ್ಞಾನಾಕಾಂಕ್ಷಿಗೆ ಜ್ಞಾನ ಲಭಿಸದು.' ಎನ್ನಲು ರಾಜನು ಆಶ್ಚರ್ಯ ಚಕಿತನಾಗಿ ಅದರಂತೆ ನಡೆದುಕೊಂಡನು. ಎತ್ತರದ ಕುರ್ಚಿಯ ಮೇಲೆ ಗುರುವಾಗಿ ಬಾಲಕನು ಕುಳಿತ ನಂತರ ಶಿಷ್ಯನಾಗಿ ರಾಜನು ಕೆಳಗೆ ನೆಲಮಟ್ಟದ ಒಂದು ಚಿಕ್ಕ ಆಸನದ ಮೇಲೆ ಕುಳಿತು 'ದೇವರು ಎಲ್ಲಿದ್ದಾನೆ?' ಎಂದು ಮೊದಲ ಪ್ರಶ್ನೆಯನ್ನು ಕೇಳಿದನು.

ಆಗ ಬಾಲಕನು ಒಂದು ಆಕಳು(ಹಸು) ತರಿಸಲು ಹೇಳಿದ. ರಾಜ ಹಸುವನ್ನು ತರಿಸಿದ. ಆಕಳಿನಿಂದ ಹಾಲು ಹಿಂಡಿಕೊಳ್ಳಲು ಹೇಳಿದ. ಅದರಂತೆ ಹಾಲನ್ನು ಹಿಂಡಿಸಲಾಯಿತು. 'ಹಾಲು ಎಲ್ಲಿತ್ತು? ಎಲ್ಲಿಂದ ಬಂತು?' ಎಂದು ಬಾಲಕ ರಾಜನನ್ನು ಕೇಳಿದ 'ಹಾಲು ಹಸುವಿನ ಶರೀರದಲ್ಲಿತ್ತು. ಕೆಚ್ಚಲಿನ ಮೂಲಕ ಬಂತು' ಎಂದು ರಾಜ ಹೇಳಿದ.

'ಹಸುವಿನ ಮೈಯಲ್ಲಿ ಹಾಲು ತುಂಬಿಕೊಂಡಿರುವಂತೆ ಪರಮಾತ್ಮನು ಬ್ರಹ್ಮಾಂಡದಲ್ಲೆಲ್ಲ ತುಂಬಿ ತುಳುಕುತ್ತಿದ್ದಾನೆ. ಅಲ್ಲದೆ ಹಸುವಿನ ಶರೀರದಲ್ಲೆಲ್ಲ ಹಾಲು ತಂಬಿದ್ದರೂ ಕೆಚ್ಚಲಿನ ಮೂಲಕ ಮಾತ್ರ ಪ್ರಕಟವಾಗುವಂತೆ ಪರಮಾತ್ಮನು ಎಲ್ಲಾ ಕಡೆ ಇದ್ದರೂ ಭಕ್ತನ ಹೃದಯವೆಂಬ ಕೆಚ್ಚಲಿನಲ್ಲಿ ಮಾತ್ರ ಪ್ರಕಟವಾಗುತ್ತಾನೆ' ಎಂದು ದೃಷ್ಟಾಂತದ ಮೂಲಕ ಮನವರಿಕೆ ಮಾಡಿಕೊಟ್ಟ. ಮುಂದೆ ಎರಡನೆಯ ಪ್ರಶ್ನೆಯನ್ನು ರಾಜನು ಕೇಳುತ್ತಾನೆ 'ದೇವರು ಯಾವ ಕಡೆ ಮುಖ ಮಾಡಿಕೊಂಡಿರುತ್ತಾನೆ?' ಬಾಲಕನು ಒಂದು ಮೇಣದ ಬತ್ತಿ ತರಿಸಿ ದೀಪ ಹಚ್ಚಲು ಹೇಳಿದ. 'ಈ ಜ್ಯೋತಿಯು ಯಾವ ಕಡೆ ಮುಖ ಮಾಡಿದೆ?' ಎಂದು ರಾಜನನ್ನು ಕೇಳಿದಾಗ ರಾಜ ಅದು ಎಲ್ಲಾ ದಿಕ್ಕಿನ ಕಡೆಗೂ ಮುಖ ಮಾಡಿದೆ ಎಂದು ಹೇಳಿದನು. ಹಾಗೆಯೆ ಜ್ಯೋತಿಯಂತೆ ಪರಮಾತ್ಮನು ಸರ್ವೋತೋಮುಖನಾಗಿ ಎಲ್ಲವನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುತ್ತಾನೆ' ಎಂದು ಉತ್ತರಿಸಿದಾಗ ರಾಜನಿಗೆ ಬಹಳಷ್ಟು ಸಂತೋಷವಾಯಿತು.

ಇನ್ನು ಮೂರನೆಯ ಪ್ರಶ್ನೆ 'ದೇವರು ಏನೇನು ಮಾಡುತ್ತಾನೆ?' ಎಂದು ರಾಜನು ಕೇಳಲು ಬಾಲಕನು ತನ್ನ ಪಂಡಿತರನ್ನು ಕರೆಸಲು ಹೇಳುತ್ತಾನೆ. ಪಂಡಿತನು ಆಸ್ಥಾನಕ್ಕೆ ಬಂದ

ನಂತರ ರಾಜನನ್ನು ಉದ್ದೇಶಿಸಿ 'ರಾಜ, ದೇವರು ಏನು ಮಾಡುತ್ತಾನೆಂದರೆ ಅವನು ಸರ್ವಶಕ್ತನು. ತಾನು ಮಹಾಪಂಡಿತ ಎಂದು ಬಿರುದು ಬರೆದುಕೊಂಡು ಓಡಾಡುತ್ತಿದ್ದ ನಿಮ್ಮ ಪಂಡಿತನನ್ನು ದಡ್ಡನನ್ನಾಗಿ ಮಾಡಿ ಮನೆಯಲ್ಲಿ ಕೂಡಿಸಿದ್ದಾನೆ. ಸಾಮಾನ್ಯ ಸೇವಕನನ್ನು ಗುರುವನ್ನಾಗಿ ಮಾಡಿ ಉನ್ನತಾಸನದ ಮೇಲೆ ಕೂಡಿಸಿದ್ದಾನೆ. ಸಿಂಹಾಸನದ ಮೇಲಿದ್ದ ರಾಜನನ್ನು ಶಿಷ್ಯನನ್ನಾಗಿ ಮಾಡಿ ಕೆಳಗೆ ಕೂಡಿಸಿದ್ದಾನೆ. ಪರಮಾತ್ಮನು ಏನೆಲ್ಲವನ್ನು ಮಾಡಬಲ್ಲ. ಅವನು ಸೃಷ್ಟಿ ಸ್ಥಿತಿ ಲಯಗಳ ಕಾರಣಕರ್ತ. ತನ್ನ ವಿನೋದಕ್ಕೆ ತಾನೇ ಜಗತ್ತನ್ನು ಸೃಷ್ಟಿಸುತ್ತಾನೆ; ಯಂತ್ರವಾಹಕನಾಗಿ ಕ್ರಮಬದ್ಧವಾಗಿ ಸೃಷ್ಟಿಯನ್ನು ನಡೆಸುತ್ತಾನೆ. ಜಗದ್ವಿಲಾಸ ಸಾಕೆನಿಸಿದರೆ ತನ್ನೊಳಗೆ ಅಡಗಿಸಿಕೊಳ್ಳಬಲ್ಲ.' ಎಂದು ಬಾಲಕನು ಅರಸನ ಪ್ರಶ್ನೆಗಳಿಗೆ ಉತ್ತರಿಸಿ ರಾಜನಿಂದ ಬಹುಮಾನ ಮತ್ತು ಸನ್ಮಾನ ಪಡೆಯುತ್ತಾನೆ. ಈ ದೃಷ್ಟಾಂತ ಆಗಮ ಜ್ಞಾನಿ ಅಜ್ಞಾನಿಯಯ್ಯ ಎಂಬ ಮಾತಿಗೆ ಸಾಕ್ಷಿಯಾಗಿದೆ.

ಮುಂದೆ ಹೇಳುತ್ತಾರೆ 'ನಿಯಮ ಜ್ಞಾನಿ ನೀಚದೇಹಿಯಯ್ಯ' ಎಂದು. ಇಲ್ಲಿ ನಿಯಮ ಎಂದಾಕ್ಷಣ ನಮ್ಮ ಅರಿವಿಗೆ ಬರುವುದು ಪತಂಜಲಿ ಯೋಗ ಸೂತ್ರದಲ್ಲಿ ಪ್ರತಿಪಾದಿಸಿರುವ ಅಷ್ಟಾಂಗ ಯೋಗದಲ್ಲಿ ಒಂದಾದ ನಿಯಮದ ಬಗ್ಗೆ. ಪತಂಜಲಿ ಮಹರ್ಷಿಗಳು ತಾವು ಪ್ರಸ್ತಾಪಿಸುವ ಅಷ್ಟಾಂಗಯೋಗದಲ್ಲಿ ಬರುವ ನಿಯಮದ ವಿವರಣೆಯಲ್ಲಿ ಸಾಧಕನು ಶೌಚ, ಸಂತೋಷ, ತಪ, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ ಇವುಗಳನ್ನು ಅಭ್ಯಸಿಸಿ ಅಳವಡಿಸಿಕೊಳ್ಳಲು ಬೋಧಿಸುತ್ತಾರೆ. ಇವು ಸಾಧಕನ ವ್ಯಕ್ತಿತ್ವ ವಿಕಾಸ ಮತ್ತು ಪರಿಪೂರ್ಣತೆಗಾಗಿ ಬೇಕು. ಶೌಚ ಎಂದರೆ ದೇಹವನ್ನು ಶುಚಿಯಾಗಿರಿಸುವುದು. ದೇಹವನ್ನು ಶುದ್ಧವಾದ ನೀರಿನಿಂದ ನಿತ್ಯವೂ ಸ್ವಚ್ಛಗೊಳಿಸುವುದು. ಇದರಿಂದ ದೈಹಿಕವಾದ ಉಲ್ಲಾಸದೊಂದಿಗೆ ಮನಸ್ಸು ಪ್ರಫುಲ್ಲವಾಗಿರುತ್ತದೆ. ದಿನವೂ ಸ್ನಾನ ಮಾಡುವುದರಿಂದ ಚರ್ಮದ ಅಲರ್ಜಿ, ಬೆವರಿನ ದುರ್ಗಂಧ ಮುಂತಾದ ದೋಷಗಳ ಪರಿಹಾರವೂ ಆಗುತ್ತದೆ. ಇದರ ಜತೆಗೆ ಧರಿಸುವ ವಸ್ತ್ರಗಳು, ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿರಿಸಿಕೊಳ್ಳಬೇಕು. ಎರಡನೆಯ ನಿಯಮದಂತೆ ಸಾಧಕನು ಸಂತೋಷಭರಿತನಾಗಿರಬೇಕು. ಈ ಸಂತೋಷ ಹೇಗೆ ಲಭ್ಯವಾಗುತ್ತದೆ? ಸತ್ಯಶುದ್ಧ ಕಾಯಕ ಮಾಡಿ ಸಂಪಾದಿಸಿ, ಬಂದುದರಲ್ಲಿಯೇ ಸಂತೃಪ್ತಿಯಿಂದ ಜೀವಿಸುವುದು. ಹಾಗೆ ಸಂಪಾದಿಸಿದ ಒಂದಂಶವನ್ನು ದೇವರು, ಧರ್ಮ ಪ್ರಚಾರಕ್ಕೆ ಅಲ್ಲದೆ ಸಮಾಜ ಸೇವೆಗೆ ವಿನಿಯೋಗಿಸಬೇಕು. ಆಗ ಮನಸ್ಸಿನಲ್ಲಿ ದುರಾಸೆ ರಾಗ ದ್ವೇಷಗಳಿಗೆ ಅವಕಾಶ ಸಿಗದೆ ತಾನಾಗಿಯೇ ಸಂತೋಷ ಲಭಿಸುತ್ತದೆ. ಮೂರನೆಯ ನಿಯಮ ತಪ ಎಂದರೆ ಕಾಯ ಮತ್ತು ಮನೋ ವಿಕಾರಗಳನ್ನು ಆತ್ಮಸಂಯಮದಿಂದ ನಿಗ್ರಹಿಸಲು ಶ್ರಮಿಸುವುದು. ಅಂದರೆ ಮಿತಾಹಾರ, ಪೂಜೆ, ಧ್ಯಾನ ಮುಂತಾದ ಆಚಾರಗಳಿಂದ ಮನಸ್ಸು ಮತ್ತು ಇಂದ್ರಿಯಗಳ ಮೇಲೆ ಹತೋಟಿ ಹೊಂದುವುದು. ನಾಲ್ಕನೆಯ ನಿಯಮ ಸ್ವಾಧ್ಯಾಯ– ಇಲ್ಲಿ ಪ್ರತಿಯೊಬ್ಬ ಸಾಧಕನು ಜ್ಞಾನಾರ್ಜನೆಗಾಗಿ ಸಕಲ ವೇದಶಾಸ್ತ್ರ, ಉಪನಿಷತ್, ವಚನಶಾಸ್ತ್ರ ಅಧ್ಯಯನವನ್ನು ಮಾಡಿ ತನ್ನ ಬುದ್ಧಿ–ಮನಸ್ಸಿಗೆ ಸಂಸ್ಕಾರ ಕೊಡಬೇಕು. ಐದನೆಯ ನಿಯಮ ಈಶ್ವರ ಪ್ರಣಿಧಾನ ಎನ್ನುತ್ತಾರೆ ಪತಂಜಲಿ ಮಹರ್ಷಿಗಳು. ಈ ಹಂತದಲ್ಲಿ ಸಾಧಕನು ತನ್ನ ಜೀವಿತದ ಎಲ್ಲಾ ಫಲಾಫಲಗಳನ್ನು ಶರಣಾಗತಿಭಾವದಿಂದ ಗುರು ಮತ್ತು ಪರಮಾತ್ಮನ ಚರಣಗಳಲ್ಲಿ ಅರ್ಪಿಸಬೇಕು.

ನಿಯಮಗಳು ಅಂದರೆ ಕಟ್ಟುಪಾಡು, ನೇಮನಿಷ್ಠೆ, ವ್ರತ ಎಂಬ ಅರ್ಥವೂ ಇದೆ. ಶ್ರೀ ಸಿದ್ಧರಾಮೇಶ್ವರರು ನಿಯಮದಾಸರನ್ನು ನೀಚದೇಹಿ ಎಂದು ಜರಿದಿರುವುದು ಚಿಂತನೆಗೆ

ಈಡುಮಾಡುತ್ತದೆ. ಗುರು ಬಸವಣ್ಣನವರು ಹೇಳುತ್ತಾರೆ 'ನೋಡಿ ನೋಡಿ ಮಾಡುವ ನೇಮ ಸಲ್ಲವು ಸಲ್ಲವು' ಎಂದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ 'ಕ್ರಮದಾಸರಿಂದ ಯಾವ ಸಾಧನೆಯೂ ಆಗುವುದಿಲ್ಲ' ಎಂದು. ಈ ಮಹನೀಯರ ಮಾತುಗಳನ್ನು ಮನನಿಸಿದಾಗ ತಿಳಿದು ಬರುವುದಿಷ್ಟು. ಸಾಧಕನು ತಾನು ಕೇಳಿ, ನೋಡಿ, ನಂಬಿರುವ ನಿಯಮ, ನೇಮನಿಷ್ಠೆಗಳನ್ನು ಅತಿಯಾಗಿ ಅಪ್ಪಿಕೊಂಡು ಆಚರಿಸುವಾಗ ಆಗುವ ಅನಾಹುತಗಳು ಅಷ್ಟಿಷ್ಟಲ್ಲ. ಏಕೆಂದರೆ ನಿಯಮಜ್ಞಾನಿ ಎನಿಸಿಕೊಂಡವನು ಇಲ್ಲಿ ನಿಯಮಗಳನ್ನು ಸರಿಯಾಗಿ ಅದರಲ್ಲು ನೂರಕ್ಕೆ ನೂರರಷ್ಟು ಪರಿಶುದ್ಧವಾಗಿ ಆಚರಣೆಗೆ ತಂದೆನೋ ಇಲ್ಲವೋ ಎಂಬ ಸಂದೇಹದಲ್ಲೆ ಮುಳುಗಿ ನಿತ್ರಾಣನಾಗುತ್ತಾನೆ. ಅಕಸ್ಮಾತ್ ಏನಾದರೂ ಹೆಚ್ಚುಕಡಿಮೆಯಾಯಿತೋ ನಿಯಮ ಪಾಲನೆಯಲ್ಲಿ ದೋಷವಾಗಿದೆ ಎಂಬ ಭ್ರಮೆಯಿಂದ ಮತ್ತಷ್ಟು ಕುಗ್ಗಿಹೋಗುತ್ತಾನೆ. ಈ ದೋಷ ಪರಿಹಾರಕ್ಕಾಗಿ ಮಂತ್ರವಾದಿಯ ಬಳಿಯೋ ಅಥವಾ ಜ್ಯೋತಿಷಿಯ ಬಳಿಯೋ ಹೋದರೆ ಇಂಥವರಿಗಾಗಿಯೇ ಕಾಯುತ್ತಾ ಕುಳಿತಿರುವ ಜ್ಯೋತಿಷಿ ಪೂಜೆ ಮಾಡಿಸಿದರೆ ದೋಷ ಪರಿಹಾರವಾಗುತ್ತದೆಂದು, ಈ ಪೂಜೆಗೆ ಮತ್ತೆ ಕೆಲವು ನೇಮಗಳನ್ನು ಹೇಳುತ್ತಾನೆ. ಟಿ.ವಿ. ಚಾನಲ್ಲುಗಳಲ್ಲಿ ಜ್ಯೋತಿಷಿಗಳು ಸಮಸ್ಯೆಗಳ ದೋಷ ಪರಿಹಾರಕ್ಕಾಗಿ ಹೇಳುವ ಪೂಜೆಯ ಖರ್ಚು ಮತ್ತು ನಿಯಮ(ಕ್ರಮ)ಗಳ ಪಟ್ಟಿ ನೋಡಿದಾಗ ಪರಿಹಾರಕ್ಕಿಂತ ಸಮಸ್ಯೆಗಳನ್ನು ನೇರವಾಗಿ ಎದುರಿಸುವುದೇ ಮೇಲು ಎಂದೆನಿಸದೆ ಇರದು. ಇಂಥ ನಿಯಮದಾಸರು ತಮ್ಮ ಆಯುಷ್ಯವನ್ನೆಲ್ಲಾ ಅವರಿವರು ಹೇಳಿದ ಮತ್ತು ನೋಡಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲೆ ಕಳೆದುಬಿಡುತ್ತಾರೆ. ಹೀಗಾಗಿ ಅವರಿಗೆ ದೇವರ ನಿಜವಾದ ಸ್ವರೂಪ–ಅಸ್ತಿತ್ವದ ಬಗ್ಗೆ ತಿಳಿಯಲು ಸಮಯ ಸಿಗುವುದಿಲ್ಲ.

ಮುಂದೆ ಶ್ರೀ ಸಿದ್ಧರಾಮೇಶ್ವರರು ಶೀಲಜ್ಞಾನಿ ಸಂಕಲ್ಪದೇಹಿಯಯ್ಯ ಎಂದು ಮತ್ತೊಂದು ಬಗೆಯ ಸಾಧಕನನ್ನು ಎದುರಿಗೆ ತರುತ್ತಿದ್ದಾರೆ. ಇಲ್ಲಿ ಶೀಲ ಎಂದರೆ ಮಡಿಹುಡಿ ಎಂದು ಶಾಸ್ತ್ರವಿಧಿಗಳನ್ನು ಮಾಡುತ್ತಾ ಯಾರನ್ನು ಮುಟ್ಟಿಸಿಕೊಳ್ಳದೆ ಹಾರಾಡುವವರು. ಇಂಥವರು ಆ ಶಾಸ್ತ್ರದಲ್ಲಿ ಹಾಗೆ ಹೇಳಿದೆ; ಈ ಶಾಸ್ತ್ರದಲ್ಲಿ ಹೀಗೆ ಹೇಳಿದೆ ಇದು ಶಾಸ್ತ್ರ ನಿಯಮ; ಹೀಗೆ ಮಾಡಲೇ ಬೇಕು, ಇದರಿಂದ ಇಂಥ ಫಲ ಪ್ರಾಪ್ತಿ ಆಗುತ್ತದೆ ಎಂದು ನಂಬಿ ಕಾರ್ಯಗಳನ್ನು ಮಾಡುವುದು ಇವರ ಜಾಯಮಾನ. ಹೀಗಾಗಿ ಇವರಿಗೂ ಸಹ ದೇವರ ನಿಜವಾದ ಸ್ವರೂಪ–ಅಸ್ತಿತ್ವದ ಬಗ್ಗೆ ತಿಳಿಯುವ ಹಂಬಲಕ್ಕಿಂತಲೂ ಶಾಸ್ತ್ರವಿಧಿಗಳನ್ನು ಪೂರೈಸುವುದಲ್ಲೇ ಹೆಚ್ಚು ಆಸಕ್ತಿ.

ಶ್ರೀ ಸಿದ್ಧರಾಮೇಶ್ವರರ ಪ್ರಕಾರ ನಿಜಜ್ಞಾನಿಯಾದವನು ದೇವರ ನಿರಾಕಾರ ಸ್ವರೂಪ–ಅಸ್ತಿತ್ವದ ಬಗ್ಗೆ ಚನ್ನಾಗಿ ತಿಳಿದವನಾಗಿದ್ದು ಅವನನ್ನು ಇದುವರೆಗೂ ಕಂಡು ಬಂದ ಯಾವುದೆ ಶಾಸ್ತ್ರದ ಬಗ್ಗೆ ಅಜ್ಞಾನವಾಗಲಿ ಕಾಡುವುದಿಲ್ಲ. ಮಾನವ ನಿರ್ಮಿತ ಕೃತಕ ನಿಯಮಗಳ ಸಂದೇಹ ಅಥವ ಭ್ರಮೆ ಅವನ ಬಳಿ ಸುಳಿಯುವುದಿಲ್ಲ. ಸೃಷ್ಟಿಕರ್ತ ಲಿಂಗದೇವನನ್ನು ಪೂಜಿಸುವ ಮೂಲಕ ಪ್ರಾಪ್ತವಾಗುವ ಸತ್ಫಲದಿಂದ ಆತನ ಬುದ್ಧಿ ಮನಸ್ಸುಗಳು ವಿಚಲಿತವಾಗುವುದಿಲ್ಲ. ಹೀಗಾಗಿ ಅಜ್ಞಾನ, ಸಂದೇಹ, ಗೊಂದಲಗಳು ನಿಜಭಕ್ತನನ್ನು ಬಾಧಿಸುವುದಿಲ್ಲ. ಅವನು ನಿತ್ಯತೃಪ್ತ; ನಿತ್ಯಮುಕ್ತ ಎಂದು ನಿಜಜ್ಞಾನಿಯ ಪರಿಯನ್ನು ವಿವರಿಸಿದ್ದಾರೆ.

★ ★ ★

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ...

-ಶರಣ ಸಚ್ಚಿದಾನಂದ ಚಟ್ನಳ್ಳಿ. ಬಿ.ಇ.

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ
ರಾಶಿ-ಕೂಟ ಗಣ-ಸಂಬಂಧವುಂಟೆಂದು ಹೇಳಿರಯ್ಯಾ
ಚಂದ್ರ ಬಲ ತಾರಾ ಬಲವುಂಟೆಂದು ಹೇಳಿರಯ್ಯಾ
ನಾಳಿನ ದಿನಕ್ಕಿಂದಿನ ದಿನ ಲೇಸೆಂದು ಹೇಳಿರಯ್ಯಾ
ಲಿಂಗದೇವನ ಪೂಜಿಸಿದ ಫಲ ನಿಮ್ಮದಯ್ಯಾ.

ಇಂದಿನ ವೈಜ್ಞಾನಿಕ ಯುಗದಲ್ಲಿ ಟಿ.ವಿ. ಹಾಗು ಇಂಟರ್‌ನೆಟ್ ಮಾಧ್ಯಮಗಳ ಮೂಲಕವಾಗಿ ಮೂಢ ನಂಬಿಕೆಗಳು ಕಡಿಮೆಯಾಗಬೇಕಿತ್ತು ಆದರೆ ದಿನ ಬೆಳಗಾದರೆ ಟಿ.ವಿ. ಮಾಧ್ಯಮಗಳು, ಜ್ಯೋತಿಷ್ಯವನ್ನು ಹೇಳುತ್ತಿವೆ ಈ ಮೂಲಕವಾಗಿ ಯಾವುದೇ ಅರ್ಥವಿಲ್ಲದ ಜ್ಯೋತಿಷ್ಯ ಶಾಸ್ತ್ರವನ್ನು ವೈಭವೀಕರಿಸುತ್ತ ಮನುಷ್ಯನ ಮನಸ್ಸನ್ನು ಮತ್ತಷ್ಟು ದುರ್ಬಲವನ್ನಾಗಿ ಮಾಡುತ್ತಿವೆ. ಇವರ ತಾಳಕ್ಕೆ ತಕ್ಕಂತೆ ಕುಣಿಯುವ ಜನಗಳು ಅನೇಕ ಅತಿರೇಕದ ವರ್ತನೆಗಳನ್ನೂ ಮಾಡುತ್ತಾರೆ. ಜ್ಯೋತಿಷಿಗಳು ಹೇಳಿದ ಸಮಯಕ್ಕೆ ಅವಧಿ ಮುಗಿಯುವ ಮುನ್ನವೇ ಶಸ್ತ್ರ ಚಿಕಿತ್ಸೆಯ ಮೂಲಕ ಮಗುವಿನ ಜನನ ಮಾಡಿಸುವಂಥ ಕೃತ್ಯ ಮಾಡುತ್ತಾರೆ. ಹಣಕ್ಕಾಗಿ ವೈದ್ಯರು ಕೂಡ ಇವರ ತಾಳಕ್ಕೆ ತಕ್ಕಂತೆ ಕುಣಿಯುತ್ತ ಇಂಥ ಕೃತ್ಯವೆಸಗುತ್ತಿರುವುದು ವಿಪರ್ಯಾಸವೇ ಸರಿ. ಮನೆಯಲ್ಲಿ ಮಗಳು ದೊಡ್ಡವಳಾದರೆ, ಯಾರಾದರೂ ಮನೆಯಲ್ಲಿ ವಿಧಿವಶರಾದರೆ ಆ ಸಮಯಕ್ಕೂ ಜ್ಯೋತಿಷ್ಯವನ್ನು ಕೇಳುವುದು, ಇಂಥವರಿಗಾಗಿಯೇ ಕಾದು ಕುಳಿತಿರುವ ಜ್ಯೋತಿಷಿಗಳು, ತುಂಬಾ ಕೆಟ್ಟ ಗಳಿಗೆ ಎಂದು ಹೇಳಿ ಹೋಮಮಾಡಿಸಬೇಕು ಎಂದು ಹತ್ತಾರು ಸಾವಿರ ರೂಪಾಯಿಗಳನ್ನು ಕಿತ್ತುಕೊಂಡು ದುರ್ಬಲ ಮನಸ್ಸಿನ ಜನಗಳನ್ನು ಶೋಷಿಸುತ್ತಿದ್ದಾರೆ. ಪ್ರತಿಯೊಂದಕ್ಕೂ ಹೋಮವನ್ನು ಮಾಡಿಸುತ್ತ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಹಿಂದು ಸಮಾಜವನ್ನು ಶೋಷಿಸುತ್ತಿದ್ದಾರೆ. ಮಕ್ಕಳಿಗೆ ಏನೇ ಕಾಯಿಲೆ ಬಂದರೂ ತಾಯಿತ(ಯಂತ್ರ)ಗಳನ್ನು ಕಟ್ಟುವುದು, ಮನೆಯಲ್ಲಿ ಕೆಲವೊಂದು ಬಗೆಯ ಯಂತ್ರಗಳನ್ನು ಕಟ್ಟುವುದು ಇದಕ್ಕಾಗಿ ಟಿ.ವಿ. ಮಾಧ್ಯಮಗಳಲ್ಲಿ ಜಾಹಿರಾತಿನ ಮೂಲಕವಾಗಿ ಯಂತ್ರಗಳನ್ನು ವೈಭವೀಕರಿಸುವುದು ಇಂಥ ಒಂದು ವ್ಯವಸ್ಥೆ ನಮ್ಮ ದೇಶದಲ್ಲಿ ಬಿಟ್ಟರೆ ಬೇರೆಲ್ಲೂ ಸಿಗುವುದಿಲ್ಲ. ಇದಕ್ಕೆಲ್ಲ ಕಾನೂನು ಪರಿಹಾರ ನೀಡಬಲ್ಲದು ಆದರೆ ಕಾನೂನು ಮಾಡಬೇಕಾದವರೇ ಇಂಥ ಎಲ್ಲಾ ಮೂಢಾಚರಣೆಗಳಲ್ಲಿ ತೊಡಗಿರುವುದರಿಂದ ಅವರಿಂದ ಮೂಢ ನಂಬಿಕೆಯ ನೀಷೇದ ಕಾನೂನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ದೇಶದಲ್ಲಿ ಪ್ರತಿ ನಿಮಿಷಕ್ಕೆ 29 ಮಕ್ಕಳು ಹುಟ್ಟುತ್ತವೆ. ನಮ್ಮ ದೇಶದ ಪ್ರಧಾನಿ ಹುಟ್ಟಿದ ನಿಮಿಷದಲ್ಲಿಯೇ ಇನ್ನೂ ಅನೇಕರೂ ಹುಟ್ಟಿರುತ್ತಾರೆ ಆದರೆ ಅವರೊಬ್ಬರೇ ಪ್ರಧಾನಿಯಾಗಿದ್ದಾರೆ ಉಳಿದ 28 ಜನರೂ ಪ್ರಧಾನಿ ಆಗಲಿಕ್ಕೆ ಹೇಗೆ ಸಾಧ್ಯ? ಹೀಗಾಗಿ ವ್ಯಕ್ತಿಯು ಹುಟ್ಟಿನ ಸಮಯದಿಂದಾಗಿ ಮಗುವಿನ ಭವಿಷ್ಯ ನಿರ್ಮಾಣವಾಗುವುದಿಲ್ಲ ಮಗುವಿಗೆ ಕೊಡುವ ಶಿಕ್ಷಣ ಹಾಗು ಸಂಸ್ಕಾರದಿಂದ ಮತ್ತು ಮಗು ಬೆಳೆಯುವ ಪರಿಸರದಿಂದ ಅದರ ಭವಿಷ್ಯ ನಿರ್ಮಾಣವಾಗುತ್ತದೆ. ಎಲ್ಲಾ ದೇಶಗಳಲ್ಲೂ ಎಲ್ಲಾ ಸಮಯದಲ್ಲೂ ವಿಮಾನಗಳು ಹಾರಾಡುತ್ತವೆ; ರೈಲುಗಳು, ಬಸ್ಸುಗಳು ಓಡುತ್ತಿರುತ್ತವೆ. ಅಂದಾಗ ರಾಹುಕಾಲ ಗುಳಿಕಕಾಲ ಯಮಗಂಡ ಕಾಲಗಳು ಕೇವಲ ಭಾರತೀಯರಿಗೆ ಮಾತ್ರ

ಹೇಗೆ ಕೆಡಕನ್ನುಂಟು ಮಾಡುತ್ತವೆ ? !

ಮದುವೆ ಮಾಡುವಾಗಲಂತೂ ಅನೇಕರು ತುಂಬಾ ಕ್ಷುಲ್ಲಕ ಆಚರಣೆಗಳನ್ನು ಮಾಡುತ್ತಿರುತ್ತಾರೆ. ಮದುವೆಗೆ ಹುಡುಗ/ಹುಡುಗಿಯನ್ನು ಹುಡುಕುವುದರಿಂದ ಹಿಡಿದು ಮದುವೆ ಮುಗಿಯುವವರೆಗೆ ಕಾಲ, ದಿಕ್ಕು, ದಿನ, ವಾರ, ಸಮಯ ಹೀಗೆ ಹಲವಾರು ವಿಷಯಗಳಲ್ಲಿ ಜ್ಯೋತಿಷ್ಯರ ಮೊರೆ ಹೋಗುತ್ತಾರೆ. ಇದರಿಂದ ನಷ್ಟವೇ ಇದೆ ಹೊರತು ಪ್ರಯೋಜನವೆಂದೂ ಆಗಲಾರದು. ಪರಮಾತ್ಮನು ಮಾಡಿರುವ ಯಾವುದೇ ಸಮಯ, ಕಾಲ, ದಿನ, ದಿಕ್ಕುಗಳು ಯಾವುದೂ ತಮ್ಮಿಂದ ತಾವೆ ಕೆಟ್ಟವುಗಳಲ್ಲ. ಯಾವ ಸಮಯದಲ್ಲಿ ನಾವು ಕೆಟ್ಟದನ್ನು ಯೋಚನೆ ಮಾಡುತ್ತೇವೆಯೋ, ಯಾವದಿನದಲ್ಲಿ ನಾವು ಕೆಟ್ಟ ಕೆಲಸಗಳನ್ನು ಮಾಡುತ್ತೇವೆಯೋ ಯಾವ ಸಂದರ್ಭದಲ್ಲಿ ನಾವು ಇತರರಿಗೆ ಕೆಡುಕನ್ನು ಬಯಸುತ್ತೇವೆಯೋ ಅದೇ ಕೆಟ್ಟ ಸಮಯ; ಕೆಟ್ಟ ದಿನ; ಕೆಟ್ಟ (ಯಮಗಂಡ)ಕಾಲ. ಯಾವ ಸಮಯದಲ್ಲಿ ನಾವು ಒಳ್ಳೆಯದನ್ನು ಯೋಚನೆ ಮಾಡುತ್ತೇವೆಯೋ, ಯಾವದಿನದಲ್ಲಿ ನಾವು ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆಯೋ ಯಾವ ಸಂದರ್ಭದಲ್ಲಿ ನಾವು ಇತರರಿಗೆ ಒಳಿತನ್ನು ಬಯಸುತ್ತೇವೆಯೋ ಅದೇ ಒಳ್ಳೆಯ ಸಮಯ, ಒಳ್ಳೆಯ ದಿನ.

ಬೆಂಗಳೂರಿನಂಥ ಒಂದೇ ಊರನ್ನೇ ನಾವು ಉದಾಹರಣೆಯಾಗಿ ತೆಗೆದು ಕೊಳ್ಳುವುದಾದರೆ ಅಪ್ಪಟ ಬಸವ ತತ್ವಾನುಯಾಯಿಗಳನ್ನು ಹೊರತು ಪಡಿಸಿ ಇಲ್ಲಿ ಎಲ್ಲರೂ ಸಮಯಾಸಮಯಗಳನ್ನೂ ನೋಡಿ, ಜ್ಯೋತಿಷಿಗಳನ್ನು ಕೇಳಿ ಹುಡುಗ ಹುಡುಗಿಯ ಜಾತಕ/ಜನ್ಮ ಕುಂಡಲಿಗಳನ್ನು ನೋಡಿ, ರಾಶಿ ಕೂಟಗಳು ಹೊಂದಾಣಿಕೆಯಾದರೆ ಮಾತ್ರ ಮದುವೆ ಮಾಡುತ್ತಾರೆ. ಆದರೆ ಇಲ್ಲಿ ನಡೆಯುವಂಥ ವರದಕ್ಷಿಣೆ ಕಿರುಕುಳಗಳು, ವರದಕ್ಷಿಣೆಗಾಗಿ ಹತ್ಯೆಗಳು ಬೇರೆ ಕಡೆ ನಡೆಯುವುದಿಲ್ಲ. ಬೆಂಗಳೂರಿನ ಕೌಟುಂಬಿಕ ನ್ಯಾಯಲಯಗಳಲ್ಲಿ ಪ್ರತಿದಿನವೂ ಅನೇಕ ವಿವಾಹ ವಿಚ್ಛೇದನಗಳೂ ನಡೆಯುತ್ತಿರುತ್ತವೆ. ಇಷ್ಟೆಲ್ಲಾ ಗೊತ್ತಿದ್ದರೂ ಜನಗಳು ಜಾತಿ, ಜಾತಕ ಜನ್ಮಕುಂಡಲಿಗಳನ್ನು ನೋಡುವುದು ಬಿಡುವುದಿಲ್ಲ. ಸದ್ಗುಣ, ಸನ್ನಡತೆ ಸುಸಂಸ್ಕೃತಿಗಳಿಗಿಂತಲೂ ಜಾತಿ, ಜಾತಕ ಜನ್ಮಕುಂಡಲಿಗಳಿಗೇ ಜನ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಇದರಿಂದ ತಮ್ಮ ದುರ್ಗತಿಗೆ ತಾವೇ ಕಾರಣರಾಗುತ್ತಾರೆ. ಇಂಥ ಅನೇಕ ಜ್ಯೋತಿಷ್ಯ ಸಂಬಂಧವಾದ ವಿಚಾರಗಳನ್ನು ಶರಣರು ಅವುಗಳ ಇರುವಿಕೆಗಳ ಬಗ್ಗೆ ಪ್ರಶ್ನಿಸಿ, ಅವುಗಳನ್ನು ತೀವ್ರವಾಗಿ ಖಂಡಿಸುತ್ತಾರೆ.

ಹಾವಾಡಿಗನು ಮೂಕೊರತಿಯು
ತನ್ನ ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲ್ಲೊಬ್ಬ ಹಾವಾಡಿಗ ಮೂಕೊರತಿಯ ಕಂಡು,
'ಶಕುನ ಹೊಲ್ಲೆ'ಂಬ ಚದುರನ ನೋಡಾ !
ತನ್ನ ಸತಿ ಮೂಕೊರತಿ, ತನ್ನ ಕೈಯಲ್ಲಿ ಹಾವು,
ತಾನೂ ಮೂಕೊರೆಯ.
ತನ್ನ ಭಿನ್ನವನರಿಯದೆ, ಅನ್ಯರನೆಂಬ
ಕುನ್ನಿಯನೇನೆಂಬೆ ಲಿಂಗದೇವಾ!

ಗುರು ಬಸವಣ್ಣನವರು ಒಂದು ಸನ್ನಿವೇಶವನ್ನು ಈ ವಚನದಲ್ಲಿ ಚಿತ್ರಿಸಿದ್ದಾರೆ. ತನ್ನಲ್ಲಿಯೇ

ಅನೇಕ ನ್ಯೂನ್ಯತೆಗಳನ್ನು ಹೊಂದಿರುವ ಒಬ್ಬ ಹಾವಾಡಿಗ ತನ್ನ ಮಗನ ಮದುವೆಗೆ ಜ್ಯೋತಿಷ್ಯ ಕೇಳಲಿಕ್ಕೆ ಹೋಗುವಾಗ ಎದುರಿಗೆ ತನ್ನಂತೆಯೇ ನ್ಯೂನ್ಯತೆ ಇರುವ ಇನ್ನೊಬ್ಬ ವ್ಯಕ್ತಿ ಬಂದಾಗ ಶಕುನ ಹೊಲ್ಲೆಂಬ/ ಸಮಯ ಸರಿಯಿಲ್ಲವೆಂದು ಹಿಂದಿರುಗುವವನಿಗೆ ಏನೆನ್ನಬೇಕು ಎನ್ನುತ್ತಾರೆ.

ಮಂಗಳೂರಿನ ಕಡೆ ಯಾರಾದರೂ ಯಾವುದಾದರೂ ಕೆಲಸಗಳಿಗಾಗಿ ಹೊರ ಹೋಗುತ್ತಿದ್ದರೆ, ಮತ್ತೊಬ್ಬರು ಎಲ್ಲಿಗೆ ಹೋಗುತ್ತಿದ್ದೀರಿ? ಎಂದು ಕೇಳಿದರೂ ಅದನ್ನು ಅಪಶಕುನವೆಂದು ಭಾವಿಸಿ ಹಾಗೆ ಕೇಳಿದವರಿಗೆ ಬೈದು ಸ್ವಲ್ಪ ಹೊತ್ತು ಕುಳಿತು ಮತ್ತೆ ಹೋಗುತ್ತಾರೆ. ಇಂಥ ಅನೇಕ ಹಾಸ್ಯಸ್ಪದ ಆಚರಣೆಗಳು ನಮ್ಮ ದೇಶದಲ್ಲಿ ಮನೆ ಮಾಡಿವೆ.

ವಿಜ್ಞಾನ ಎಷ್ಟೇ ಮುಂದುವರಿದರೂ ಜನ ಗಿಳಿ ಶಾಸ್ತ್ರ, ಇಲಿ ಶಾಸ್ತ್ರಗಳನ್ನು ಕೇಳುವುದು/ ನಂಬುವುದನ್ನು ಬಿಡುವುದಿಲ್ಲ. ನಮ್ಮ ದೇಶದಲ್ಲಿ ರಾಜಕೀಯ ವ್ಯಕ್ತಿಗಳ ಭವಿಷ್ಯದ ಮೇಲೆ ಮತದಾರನಿಗಿಂತಲೂ ಶಾಸ್ತ್ರ ಹೇಳುವ ಇಲಿಗಳು ಗಿಳಿಗಳು ಹೆಚ್ಚು ಪ್ರಭಾವ ಬೀರುತ್ತವೆ.

ಗಿಳಿಯೋದಿ ಫಲವೇನು ಬೆಕ್ಕು ಬಹುದ ಹೇಳಲರಿಯದು
ಜಗವೆಲ್ಲವ ಕಾಂಬ ಕಣ್ಣು ತನ್ನ ಕೊಂಬ ಕೊಯ್ಲೆಯ ಕಾಣಲರಿಯದು.
ಇದಿರ ಗುಣವ ಬಲ್ಲೆವೆಂಬರು, ತಮ್ಮ ಗುಣವನರಿಯರು ಲಿಂಗದೇವಾ.

ಗುರು ಬಸವಣ್ಣನವರು ಗಿಳಿ/ಇಲಿ ಶಾಸ್ತ್ರಗಳನ್ನು ಖಂಡಿಸುತ್ತಾರೆ. ಗಿಳಿಯ ಓದಿನಿಂದ ಏನು ಫಲ? ಸ್ವತಃ ಗಿಳಿಯು ಬೆಕ್ಕು ಯಾವ ದಿಕ್ಕಿನಿಂದ ಬಂದು ಅದನ್ನು ತಿಂದು ಹಾಕುತ್ತದೆ ಎಂಬುದನ್ನು ಅರಿಯದು. ಜಗತ್ತಿನ ಜನಗಳ ಭವಿಷ್ಯವನ್ನು ಹೇಳುವ ಗಿಳಿ ತನಗೆ ಬರುವ ಅಪಾಯವನ್ನು ಅರಿಯದು. ಭವಿಷ್ಯ ಹೇಳುವವರು ಬೇರೆಯವರ ಬಗ್ಗೆ ಅನೇಕ ಮಾತುಗಳನ್ನು ಹೇಳುತ್ತಾರೆ. ಆದರೆ ತಮ್ಮ ಭವಿಷ್ಯ ಏನೆಂದು ಅವರಿಗೇ ಗೊತ್ತಿರುವುದಿಲ್ಲ.

ಹಂಜರ ಬಲ್ಲಿತ್ತೆಂದು ಅಂಜದೇ ಓದುವ ಗಿಳಿಯೇ
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ ನಿನ್ನ ಮನದಲ್ಲಿ
ಮಾಯಾ ಮಂಜರ ಕೊಲುವಡೆ
ನಿನ್ನ ಹಂಜರ ಕಾವುದೆ? ನಮ್ಮ ಲಿಂಗದೇವನಲ್ಲದೆ?

ನಾನು ಬಹಳ ಸುಭದ್ರವಾದ ಸ್ಥಳದಲ್ಲಿದ್ದೇನೆ ನನ್ನನ್ನು ಯಾರೂ ಏನೂ ಮಾಡಲಿಕ್ಕಾಗುವುದಿಲ್ಲ. ಎಂದು ತಿಳಿದಿರುವ ಗಿಳಿಯನ್ನು ಮೃತ್ಯು ಎನ್ನುವ ಮಾಯಾ ಮಂಜರ(ಬೆಕ್ಕು) ಬಂದಾಗ ಗಿಳಿಯನ್ನು ಕಾಯುವ ಶಕ್ತಿ ಪರಮಾತ್ಮನಿಗೆ ಮಾತ್ರ ಇದೆಯೇ ಹೊರತು ಅದರ ಹಂಜರಕ್ಕಾಗಲಿ ಅದಕ್ಕೆ ಮಾತು ಕಲಿಸಿದ ಜ್ಯೋತಿಷ್ಯಿಗಾಗಲೀ ಇಲ್ಲ.

ನಮ್ಮ ದೇಶವನ್ನು ರಾಜಕಾರಣಿಗಳು ಕೆಡಿಸಿರುವಷ್ಟು ಮತ್ತಾರು ಕೆಡಿಸಿಲ್ಲ. ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ದೇಶವನ್ನು ಹಾಳು ಮಾಡಿರುವುದರಲ್ಲಿ ರಾಜಕಾರಣಿಗಳು ಮೊದಲಿಗರು. ಇವರು ಪ್ರತಿಯೊಂದಕ್ಕೂ ಜ್ಯೋತಿಷ್ಯರು ಹೇಳಿದಂತೆ ಕೇಳುವುದು, ವಿಧಾನ ಸೌಧದಂಥ ಸಾರ್ವಜನಿಕ ಕಟ್ಟಡಗಳಲ್ಲಿ ಹೋಮ ಹವನ ಮಾಡಿಸುವುದು, ಅದರ ಕಟ್ಟಡದ ಭಾಗಗಳನ್ನು ವಾಸ್ತುವಿನ ಹೆಸರಿನಲ್ಲಿ ಬದಲಾಯಿಸುವುದು ಹೀಗೆ ಇಂಥವರೇ ಮೌಢ್ಯತೆಯ ಚಟುವಟಿಕೆಗಳನ್ನು ಮಾಡುತ್ತಿದ್ದರೆ ಜನ ಸಾಮಾನ್ಯರ ಪಾಡೇನು?

ನಮ್ಮ ಶರಣರು ಇಂಥ ಮೌಢ್ಯ ಆಚರಣೆಗಳನ್ನು ಅನೇಕ ಉದಾಹರಣೆಗಳ

ಮೂಲಕವಾಗಿ ವ್ಯಂಗಿಸುತ್ತಾರೆ ಮತ್ತು ಖಂಡಿಸುತ್ತಾರೆ.

ಅಣ್ಣಾ ನೀ ಕೇಳೋ ಪಂಚಾಂಗವ ।
ಕೇಳಿದಣ್ಣಗಳೆಲ್ಲರ ಭಂಗವ

ದ್ವಾರಾವತಿಯೊಳು ಶ್ರೀಕೃಷ್ಣನು । ಶುಭ
ವಾರ ಸುಲಗ್ನವ ಬೆಸಗೊಂಡು
ಧಾರೆಯೆರೆಸಿಕೊಂಡ ಸ್ತ್ರೀಯರು । ಪದಿ
ನಾರು ಸಾವಿರಕಾದ ಭಂಗವ

ರಾಮ ಸೀತೆಯರಿಗೆ ಲಗ್ನವ । ತಮ್ಮ
ಸ್ವಾಮಿವಶಿಷ್ಠ ಮಾಡಿರಲಾಗಿ
ಆ ಮಹಾ ಸೀತೆಯ ರಾವಣನು । ಒಯ್ದ
ರಾಮನ ವನವಾಸ ಭಂಗವ

ವರಶುಭ ವೇಳೆಯ ಬೆಸಗೊಂಡು। ನಿತ್ಯ
ಬರುವ ಬ್ರಹ್ಮನು ಶಿವ ಸಭೆಯೊಳಗೆ
ಶಿರವೈದರೊಳು ನಡುದಲೆಯನು । ಪುರ
ಹರನಿಂದ ಕಳಕೊಂಡ ಭಂಗವ

ಸರಸ್ವತಿದೇವಿ ಜೋಯಿಸರಿಂದ । ಅನ
ವರತ ಶುಭಾಶುಭ ವಿವರಿಸಿ
ಶರಭಾವತಾರನ ದೆಸೆಯಿಂದ । ಲವ
ಳುರೆ ಮೂಕೊರತಿಯಾದ ಭಂಗವ

ತಾನೆ ದೇವೇಂದ್ರ ಪಂಚಾಂಗವ। ಸನು
ಮಾನ ಮನ್ನಣೆಯಿಂದ ಲಾಲಿಸಿ
ಮೌನಿಯ ಶಾಪದಿ ತನುವೆಲ್ಲ । ಬಹು
ಯೋನಿ ಮಂಡಲವಾದ ಭಂಗವ

ಇನನುದಯದೊಳೆದ್ದು ಮನ್ಮಥ । ಶುಭ
ದಿನ ಶುಭ ತಿಥಿಗಳ ಕೇಳುತ್ತ
ಘನ ಶಿವನಕ್ಷಿಯ ಬಿಸಿಯಿಂದ। ತನ್ನ
ತನುವ ನೀಗಿದ ಮಾನಭಂಗವ

ವಾರ ತಿಥಿ ಯೋಗ ಕರಣವ। ಶುಭ
ತಾರೆಗಳೊಳು ದಕ್ಷಯಜ್ಞವ
ಪೂರೈಸಲು ವೀರಭದ್ರನು । ಸೆರೆ
ಸೂರೆಮಾಡಿದ ಮಾನಭಂಗವ

ಕಷ್ಟ ಕರ್ಮವ ನೀಗಬೇಕೆಂದು । ಬಹು

ನಿಷ್ಠೆಯಿಂದ ಪಂಚಾಂಗವ ಕೇಳಿ
ಸೃಷ್ಟಿಯೊಳಗೆ ಪಂಚ ಪಾಂಡವರು । ದೇಶ
ಭ್ರಷ್ಟರಾದ ಮಾನಭಂಗವ

ಮೂರೇಕದಶಕೋಟಿ ದೇವತರು । ಶುಭ
ತಾರೆಯ ದೈವವೆಂದಾರಾಧಿಸಿ
ತಾರಕಾಸುರನಿಂದಲೊದೆಯ । ತಿಂದು
ಮಾರವೈರಿಯ ಮೊರೆಹೊಕ್ಕರೇಕಯ್ಯ

ಕುರುಡುಕುಂಟನ ಹಲ್ಲುಮುರುಕನ ಒಮ್ಮೆ
ಗುರುತಲ್ಪಕನ ಬಲವನು ಕೇಳಿ
ಚರಿಸಲಾಗದು ಲಿಂಗವಂತರು । ಎಂಬ
ವರಪುರಾತರ ವಚನಗಳುಂಟು

ಮೃಡಲಿಂಗಪೂಜೆ ಜಂಗಮ ದಾಸೋಹವ
ದೃಢ ನಿಷ್ಠೆಯೊಳು ಶುಭದಿನವೆಂದು
ಜಡೆಯ ಸದ್ಗುರು ಚೆನ್ನವೀರನ ।
ಪಾದವಿಡಿದ ಭಕ್ತರಿಗಾವ ಭಯವಿಲ್ಲ.

– ಮೈಲಾರ ಬಸವಲಿಂಗ ಶರಣರು.

ಸಾಮಾನ್ಯವಾಗಿ ತಮ್ಮ ಮಗಳ ಮದುವೆ ಮಾಡುವಾಗ ತಂದೆ ತಾಯಿಯ ಆಸೆ ಅಳಿಯ ಚೆನ್ನಾಗಿ ಇರಬೇಕು ಎನ್ನುವುದರ ಜೊತೆಗೆ ನನ್ನ ಮಗಳನ್ನು ಬಿಟ್ಟು ಬೇರೆ ಸ್ತ್ರೀಯರನ್ನು ಅವನು ನೋಡ ಬಾರದು ಎಂದು. ಅದಕ್ಕಾಗಿ ಸಮಯ ಕಾಲಗಳನ್ನು ಕೇಳಿ ಮದುವೆ ಮಾಡುತ್ತಾರೆ. ಶುಭ ವಾರ ಸುಲಗ್ನವನ್ನು ನೋಡಿ ರುಕ್ಮಿಣಿಯನ್ನು ಮದುವೆ ಮಾಡಿದರೂ ಕೃಷ್ಣನಿಗೆ ಹದಿನಾರು ಸಾವಿರ ಹೆಂಡತಿಯರಾದರು ಎಂದು ಹೇಳುತ್ತಾರೆ.

ಸೀತೆಯ ತಂದೆ ಜನಕ ಮಹಾರಾಜ ಎಲ್ಲಾ ವಿದ್ಯೆಯನ್ನು ಬಲ್ಲವನಾಗಿದ್ದ ಮಾತ್ರವಲ್ಲ ಅತ್ಯಂತ ಶ್ರೇಷ್ಠರೆನಿಸಿಕೊಂಡ ಪೂಜಾರಿ ಮತ್ತು ಜ್ಯೋತಿಷಿಗಳನ್ನು ಕರೆದು ಎಲ್ಲಾ ರೀತಿಯ ಜಾತಕ ರಾಶಿಗಳನ್ನು ನೋಡಿ ರಾಮನೊಂದಿಗೆ ಮದುವೆ ಮಾಡಿಸಿದನು. ಆದರೆ ಆ ಸೀತೆ ಅನುಭವಿಸಿದ ನೋವುಗಳೆಷ್ಟೋ..! ಮಹಾರಾಜನ ಮಗಳು ರಾಜಕುಮಾರಿ ಗಂಡನ ಮನೆಗೆ ಹೋಗಿ ಮಹಾರಾಣಿಯಾಗಿ ಇರುವುದರ ಬದಲಾಗಿ 12 ವರ್ಷ ವನವಾಸ ಅನುಭವಿಸಿದಳು. ಗಂಡನಿಂದ ಅನುಮಾನಿಸಲ್ಪಟ್ಟು ತುಂಬು ಗರ್ಭಿಣಿಯಿದ್ದಾಗಲೇ ಗಂಡನಿಂದ ಶೋಷಣೆಗೊಳಗಾಗಿ ಮನೆಯಿಂದ ಹೊರಹಾಕಲ್ಪಟ್ಟು ಕಾಡಿನಲ್ಲಿ ಮಕ್ಕಳಿಗೆ ಜನ್ಮ ಕೊಡಬೇಕಾಯಿತು. ಜನಕ ಮಹಾರಾಜ ಸರಿಯಾಗಿ ಜಾತಕಗಳನ್ನು ನೋಡಿರಲಿಲ್ಲವೇ..?

ಸಭೆಗೆ ಬರುವ ಮುನ್ನ ಯಾವುದೇ ಯಜ್ಞಗಳನ್ನು ಮಾಡುವ ಮುನ್ನ ವರ ಶುಭವೇಳೆಯುನ್ನು ಪಂಚಾಂಗದಿಂದ ಕೇಳಿಯೇ ಮಾಡುವ ಬ್ರಹ್ಮನು ಶಿವನಿಂದ ಶಿರಚ್ಛೇದಕ್ಕೊಳಗಾದ. ಸರಸ್ವತಿಯು ಅನವರತವೂ ಜ್ಯೋಯಿಸರಿಂದ ಶುಭಾಶುಭವನ್ನು ವಿಚಾರಿಸುವಂಥವಳು ಆದರೂ ಶರಭಾವತಾರನಿಂದ ಮೂಗು ಕಳೆದುಕೊಂಡು ಮೂಕೊರತಿಯಾದಳೇಕೆ..? ದೇವೇಂದ್ರನು ಪಂಚಾಂಗ ನೋಡದೆ ಯಾವ ಕಾರ್ಯವನ್ನು

ಮಾಡುವವನಲ್ಲ. ನಾರಾಯಣನ ಆಜ್ಞೆ ಪಾಲಿಸದೇ ಏನನ್ನೂ ಮಾಡುವವನಲ್ಲ. ಆದರೂ ಯೋಗಿಯೊಬ್ಬರ ಹೆಂಡತಿಯನನ್ನು ಓಡಿಸಿಕೊಂಡು ಹೋಗಿ ಅವರ ಶಾಪಕ್ಕೆ ಗುರಿಯಾಗಿ ಮೈಯಲ್ಲಾ ಹುಣ್ಣು ಹುಣ್ಣಾಗಿ ಹೋದ. ಬೆಳಿಗ್ಗೆ ಏಳುತ್ತಲೇ ಮನ್ಮಥನು ಶುಭ ದಿನ ಶುಭ ತಿಥಿಗಳನ್ನು ಕೇಳಿ ಮುಂದುವರಿಯುತ್ತಿದ್ದ ಆದರೂ ಶಿವನ ಉರಿಗಣ್ಣಿನಿಂದ ಭಸ್ಮವಾಗಿ ಹೋದನೇಕೆ..?

ವಾರ, ತಿಥಿ, ಯೋಗ, ಕರಣ ಶುಭತಾರೆಗಳನ್ನು ನೋಡಿ ದಕ್ಷಬ್ರಹ್ಮನು ಯಾಗವನ್ನು ಮಾಡಿದರೂ ವೀರಭದ್ರನಿಂದ ಯಾಗದ ಸೂರೆಯಾಯಿತೇಕೆ..? ಕಷ್ಟ ಕರ್ಮವ ನೀಗಬೇಕೆಂದು ಬಹು ನಿಷ್ಠೆಯಿಂದ ಪಂಚಾಂಗವ ಕೇಳಿದ ಪಾಂಡವರು ದೇಶ ಭ್ರಷ್ಟರಾಗಿ ಮಾನಭಂಗಕ್ಕೊಳಗಾದರೇಕೆ..? ಅನೇಕ ದೇವತೆಗಳು ತಾರೆಯನ್ನೇ ದೈವವೆಂದಾರಾಧಿಸಿದವರು ತಾರಕಾಸುರನಿಂದ ಒದೆಯನ್ನು ತಿಂದು ಶಿವನ ಮೊರೆಹೊಕ್ಕರೇಕೆ..?

ಲಿಂಗವಂತರಾದ ನಾವು ಕುರುಡು(ಪರಮ ಜ್ಞಾನವಿಲ್ಲದವನ) ಕುಂಟನ (ಸದಾಚಾರವಿಲ್ಲದವನ) ಹಲ್ಲುಮುರುಕ(ಹೊಟ್ಟೆ ಪಾಡಿಗಾಗಿ ಪಂಚಾಗ ಹೇಳುವವ)ನಿಂದ ಬಲ/ಜ್ಯೋತಿಷ್ಯವನ್ನು ಕೇಳಬಾರದು ಎಂದು ಆಜ್ಞಾಪಿಸಿದ್ದಾರೆ. ದಿನ ನಿತ್ಯವೂ ಲಿಂಗ ಪೂಜೆ ಜಂಗಮದಾಸೋಹ ಮಾಡುತ್ತ ಅಷ್ಟಾವರಣಗಳನ್ನು ಧರಿಸಿ ಲಿಂಗದೇವನ ನಿಷ್ಠೆಯಲ್ಲಿರುವ ಶರಣರಿಗೆ ಯಾವ ದುಷ್ಟ ಶಕ್ತಿಯೂ ಕಾಡಲಾರದು ಎಂದು ಶರಣರು ಅಭಯ ಹಸ್ತ ನೀಡಿ ಹೇಳಿದ್ದಾರೆ. ಅದಕ್ಕಾಗಿ ನಮ್ಮಲ್ಲಿ ಯಾರಾದರೂ ಇನ್ನೂ ಇಂಥ ಆಚರಣೆಗಳನ್ನು ಮಾಡುತ್ತಿದ್ದರೆ ಅವನ್ನು ಇಂದಿನಿಂದಲೇ ಬಿಡಬೇಕು. ಗುರು–ಲಿಂಗ–ಜಂಗಮ ಪೂಜೆಗೆ ಹೊರತಾದ ಪೂಜೆಗಳನ್ನೂ ಮಾಡಬಾರದು. ಜೊತೆಗೆ ತಮ್ಮ ಮಕ್ಕಳ ಮದುವೆಮಾಡುವಾಗ ಬೀಗರಾಗುವವರಿಗೆ ನಾವು ಗುರು–ಲಿಂಗ–ಜಂಗಮದ ಹೊರತಾದ ಯಾವುದೇ ಪೂಜೆ ಮಾಡುವುದಿಲ್ಲವೆಂದು ಮೊದಲೇ ತಿಳಿಸಬೇಕು. ಇದರಿಂದ ಮಾತ್ರ ಮೆಲ್ಲಮೆಲ್ಲನೆ ಸಮಾಜದಲ್ಲಿ ಸುಧಾರಣೆಯಾಗಲು ಸಾಧ್ಯವಿದೆ.

ಸೋಮವಾರ ಮಂಗಳವಾರ ಶಿವರಾತ್ರಿಯೆಂದು ಮಾಡುವ ಭಕ್ತರ
ಲಿಂಗ ಭಕ್ತಂಗೆ ನಾನೆಂತು ಸರಿಯೆಂಬೆನಯ್ಯಾ?
ದಿನ ಶ್ರೇಷ್ಠವೋ? ಲಿಂಗ ಶ್ರೇಷ್ಠವೋ ? ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು.
ಕೂಡಲಚೆನ್ನ ಸಂಗಮದೇವಾ.

ಶರಣರಿಗೆ ನಿಚ್ಚನಿಚ್ಚವೂ ಶಿವರಾತ್ರಿಯೇ. ಇಂಥ ಭಕ್ತರಿಗೆ ಸೋಮವಾರ ಮಂಗಳವಾರ ಶ್ರೇಷ್ಠವೆಂದು ಮಾಡುವ ಭಕ್ತರು ಎಂದೂ ಸರಿ ಸಮವಾಗಲಾರರು. ದಿನ ಸಮಯವನ್ನು ನೋಡಿ ಮಾಡುವವರ ಮುಖವನ್ನು ನೋಡಲಾಗದೆಂದು ಗುರು ಚೆನ್ನಬಸವಣ್ಣವರು ಹೇಳುತ್ತಾರೆ.

ನಿತ್ಯ ಗುರು–ಲಿಂಗ–ಜಂಗಮರಾರಾಧನೆ ಮಾಡುವ ಎಮ್ಮವರಾದ ಶರಣರು ಬೆಸಗೊಂಡುದೇ ಶುಭಲಗ್ನ. ಅದೇ ನಮಗೆ ತಾರಾಬಲ ಚಂದ್ರಬಲವೆಲ್ಲವೂ. ಒಳ್ಳೆಯ ಕಾರ್ಯ ಮಾಡಲಿಕ್ಕೆ ನಾಳಿನ ದಿನಕ್ಕಿಂತ ಇಂದಿನ ದಿನವೇ ಶ್ರೇಷ್ಠ. ಕೆಟ್ಟ ಹಾನಿಕಾರಕವಾದ, ಇನ್ನೊಬ್ಬರ ಮನಸ್ಸಿಗೆ ನೋವುಂಟು ಮಾಡುವಂಥ ಕಾರ್ಯ ಮಾಡಲಿಕ್ಕೆ ಇಂದಿನ ದಿನಕ್ಕಿಂತ ನಾಳೆಯ ದಿನವೇ ಶ್ರೇಷ್ಠ ! ನಿಷ್ಠೆಯಿಂದ ಭಕ್ತಿಯಿಂದ ಲಿಂಗದೇವನ ಪೂಜೆ ಮಾಡಿದ ಫಲ ಎಂದೆಂದಿಗೂ ನಮ್ಮನ್ನು ಕಾಯುತ್ತದೆ. ಇದಕ್ಕೆ ಗುರು ಬಸವಣ್ಣನವರೇ ಸಾಕ್ಷಿ..!

ಸ್ವಯಂ ಸೇವಕರಿಗೆ ಕರೆ

- ಮಾತಾಜಿ

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತದೆ . ಧರ್ಮಪಿತರ ಆದೇಶ ಹೀಗಿರುತ್ತದೆ.

ಭಕ್ತನುಭಕ್ತನ ಮನೆಗೆ ಬಂದಡೆ, ಭೃತ್ಯಾಚಾರನ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬವ.ದೀ.248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ-ಮನ ಸೇವೆ-ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವ ಮೆಚ್ಚಿ ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿ ಇಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆ ಸಂಗ್ರಹಿಸುತ್ತಲಿರ ಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿ ಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕ ವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾ ಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ।

ಎಂಬುದು "ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2015 ರ ಜನವರಿ 11, 12, 13, 14, 15ರಂದು ನಡೆಯಲಿರುವ ಇಪ್ಪತ್ತೆಂಟನೆಯ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರಚಾರ ಪ್ರವಾಸ ಕಾರ್ಯಕ್ರಮ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.ಸ್ಥಳೀಯ ಕಾರಣದಿಂದ ಬದಲಾವಣೆ ಬೇಕಾಗಿದರೆ ತಕ್ಷಣವೇ ತಿಳಿಸಿರಿ. ಸಂಪರ್ಕಿಸುವ ದೂರವಾಣಿ: ಪೂಜ್ಯ ಶ್ರೀ ಸದ್ಗುರು ಮಾತೆ ಬಸವರತ್ನಾದೇವಿ -9481741795

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
41.	11-12-2014	ಪ್ರಭು(ಗುರು)ವಾರ	ಗಡಿಹಿಂಗ್ಲಾಜ್
42.	12-12-2014	ಮಾತೃ(ಶುಕ್ರ)ವಾರ	ಗೋಕಾಕ್
43.	13-12-2014	ಶರಣ(ಶನಿ)ವಾರ	ಗೋಕಾಕ್
44.	14-12-2014	ದೇವ(ಭಾನು)ವಾರ	ಗೋಕಾಕ್
45.	15-12-2014	ಶಿವ(ಸೋಮ)ವಾರ	ಗೋಕಾಕ್
46.	16-12-2014	ಬಸವ(ಮಂಗಳ)ವಾರ	ಶೇಗುಣಸಿ
47.	17-12-2014	ಚನ್ನ(ಬುಧ)ವಾರ	ಖವಟಕೊಪ್ಪ
48.	18-12-2014	ಪ್ರಭು(ಗುರು)ವಾರ	ತಾಂವಶಿ
49.	19-12-2014	ಮಾತೃ(ಶುಕ್ರ)ವಾರ	ಅಥಣಿ
50.	20-12-2014	ಶರಣ(ಶನಿ)ವಾರ	ಕನಮಡಿ
51.	21-12-2014	ದೇವ(ಭಾನು)ವಾರ	ಚಡಚಣ
52.	22-12-2014	ಶಿವ (ಸೋಮ)ವಾರ	ಬಿಜಾಪುರ
53.	23-12-2014	ಬಸವ(ಮಂಗಳ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
54.	24-12-2014	ಚನ್ನ(ಬುಧ)ವಾರ	ಗುಲಬರ್ಗಾ(ಮಹಾಂತನಗರ)
55.	25-12-2014	ಪ್ರಭು(ಗುರು)ವಾರ	ಯಲಮಾಮಿಡಿ
56.	26-12-2014	ಮಾತೃ(ಶುಕ್ರ)ವಾರ	ಬಸವಕಲ್ಯಾಣ
57.	27-12-2014	ಶರಣ(ಶನಿ)ವಾರ	ಬಸವಕಲ್ಯಾಣ
58.	28-12-2014	ದೇವ(ಭಾನು)ವಾರ	ಉದಗೀರ

59.	29-12-2014	ಶಿವ(ಸೋಮ)ವಾರ	ಕಮಲಾನಗರ
60.	30-12-2014	ಬಸವ(ಮಂಗಳ)ವಾರ	ಬೀದರ
61.	31-12-2014	ಚನ್ನ(ಬುಧ)ವಾರ	ಜಹಿರಾಬಾದ್
62.	01-01-2015	ಪ್ರಭು(ಗುರು)ವಾರ	ಹೈದ್ರಾಬಾದ್
63.	02-01-2015	ಮಾತೃ(ಶುಕ್ರ)ವಾರ	ಹೈದ್ರಾಬಾದ್
64.	03-01-2015	ಶರಣ(ಶನಿ)ವಾರ	ಹೈದ್ರಾಬಾದ್
65.	04-01-2015	ದೇವ(ಭಾನು)ವಾರ	ಹೈದ್ರಾಬಾದ್
66.	05-01-2015	ಶಿವ(ಸೋಮ)ವಾರ	ಹೈದ್ರಾಬಾದ್
67.	06-01-2015	ಬಸವ(ಮಂಗಳ)ವಾರ	ಹೈದ್ರಾಬಾದ್
68.	07-01-2015	ಚನ್ನ(ಬುಧ)ವಾರ	ಹೈದ್ರಾಬಾದ್
69.	08-01-2015	ಪ್ರಭು(ಗುರು)ವಾರ	ಹೈದ್ರಾಬಾದ್
70.	09-01-2015	ಮಾತೃ(ಶುಕ್ರ)ವಾರ	ಹೈದ್ರಾಬಾದ್
71.	10-01-2015	ಶರಣ(ಶನಿ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ಯಳನಾಡಿನಲ್ಲಿ ನೂತನ ಗುರು ಬಸವ ಮಂಟಪ ಹಾಗೂ ಪಾರ್ಥನಾ ಮಂದಿರ

ಗುರು ಬಸವಣ್ಣನವರ ತತ್ವ ಎಲ್ಲೆಡೆಯಲ್ಲೂ ಪ್ರಚಾರ ಹಾಗೂ ಪ್ರಸಾರವಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೋಕಿನ ಯಳನಾಡು ಎಂಬ ಗ್ರಾಮದಲ್ಲಿ ದಿ.೧೯-೫-೨೦೧೪ರಂದು ನೂತನವಾಗಿ ಬಸವ ಮಂಟಪ ಮತ್ತು ಪ್ರಾರ್ಥನಾ ಮಂದಿರದ ಉದ್ಘಾಟನೆ ಹಾಗೂ ಗುರು ಬಸವಣ್ಣನವರ ಅಮೃತ ಶಿಲಾ ಮೂರ್ತಿಯ ಪ್ರತಿಷ್ಠಾಪನೆಯು ವಿಶ್ವದ ಪ್ರಪ್ರಥಮ ಮಹಿಳಾ ಮಹಾಜಗದ್ಗುರು ಮಾತೆ ಮಹಾದೇವಿಯವರ ಅಮೃತಹಸ್ತದಿಂದ ನೆರವೇರಿತು. ಛಜಾರೋಹಣವು ಪೂಜ್ಯ ಶ್ರೀ ಈಶ್ವರಾನಂದ ಪುರಿ ಸ್ವಾಮಿಗಳು, ಹೊಸದುರ್ಗ ಇವರಿಂದ ನೆರವೇರಿತು. ಕಾರ್ಯಕ್ರಮದ ಅನುಭಾವ ಗೋಷ್ಠಿಯ ಉದ್ಘಾಟನೆಯನ್ನು ಯಳನಾಡು-ಅರಸೀಕೆರೆ ಮಹಾಸಂಸ್ಥಾನದ ಪೂಜ್ಯ ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶೀಕೇಂದ್ರ ಸ್ವಾಮೀಜಿಯವರು ನೆರವೇರಿಸಿದರು. ಜೇವರ್ಗಿಯ ಪೂಜ್ಯ ಶ್ರೀ ಸಿದ್ಧಬಸವ ಕಬೀರಾನಂದ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಬೈಲೂರಿನ ಪೂಜ್ಯ ನಿಜಗುಣಾನಂದ ಸ್ವಾಮಿಗಳು ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಪೂಜ್ಯ ಸಣ್ಣನಂಜಪ್ಪನವರು, ಬಸವ ತತ್ವ ಪ್ರಚಾರಕರು, ಕೊಳಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತರಾದ ಬಿ.ಗುರು ಪ್ರಸಾದ, ಯಲಹಂಕದ ಎಂ.ಎಸ್.ಮೈಸೂರಪ್ಪ, ಜಿ.ಬಸವರಾಜು, ವೈಕೆ. ಸೋಮಶೇಖರಯ್ಯ ಭಾಗವಹಿಸಿದ್ದರು. ಕುಮಾರಿ. ನಿಸರ್ಗ ಮತ್ತು ಚೈತ್ರ ಬೆಂಗಳೂರು, ಅವರು ವಚನ ನೃತ್ಯ ನಡೆಸಿಕೊಟ್ಟರು.

ಯಳನಾಡು ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಭಕ್ತರಿಗೆ ಬಸವ ಯೋಗಿ ಸಿದ್ಧರಾಮೇಶ್ವರ ಸಂಘ ಯಳನಾಡು ಅವರ ವತಿಯಿಂದ ಪ್ರಸಾದ ದಾಸೋಹ ವ್ಯವಸ್ಥೆ ಮಾಡಲಾಗಿತ್ತು.



ಬೆಂಗಳೂರಿನ ಮಂಜುನಾಥ ನಗರದಲ್ಲಿ ಬಿಬಿಎಂಪಿ ಸದಸ್ಯರಾದ ಶರಣ. ಎಚ್. ಆರ್. ಕೃಷ್ಣಪ್ಪನವರಿಂದ ಉದ್ಘಾಟನೆ.

2015ನೇ ಇಸ್ವಿಯ ಶರಣರ ಜಯಂತಿ ಮತ್ತು ಹಬ್ಬಗಳು

ಜನವರಿ	11-15	ಕೂಡಲ ಸಂಗಮದಲ್ಲಿ ಶರಣಮೇಳ
	14	ಬಸವ ಧರ್ಮ ಸಂಸ್ಥಾಪನಾ ದಿನ ಶರಣ ಸಮಾಗಮ
	15	ಶ್ರೀ ಸಿದ್ಧರಾಮೇಶ್ವರ ಜಯಂತಿ
	26	ಗಣರಾಜ್ಯೋತ್ಸವ
ಫೆಬ್ರವರಿ	03	ಚನ್ನಹುಣ್ಣಿಮೆ (ಉಳವಿಯಲ್ಲಿ ರಥೋತ್ಸವ ಗಣಭೋಜನ)
	17	ಮಹಾಶಿವರಾತ್ರಿ -ಸರ್ವಶರಣರ ದಿನಾಚರಣೆ
ಮಾರ್ಚ್	13	ಪೂಜ್ಯ ಮಾತಾಜಿ ವರ್ಧಂತಿ
	21	ಯುಗಾದಿ-ಅಲ್ಲಮಪ್ರಭು ಜಯಂತಿ
	21-23	ಅಲ್ಲಮಗಿರಿಯಲ್ಲಿ ಗಣಮೇಳ
ಏಪ್ರಿಲ್	04	ಅಕ್ಕಮಹಾದೇವಿ ಜಯಂತಿ
	04	ಹರಳಯ್ಯ ಜಯಂತಿ
	21	ಬಸವ ಜಯಂತಿ
ಮೇ	09-11	ಧಾರವಾಡದಲ್ಲಿ ಶರಣೋತ್ಸವ
ಜೂನ್	14	ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ
ಜೂನ್	30	ಪೂಜ್ಯ ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆ
ಆಗಸ್ಟ್	15	ಸ್ವಾತಂತ್ರ್ಯ ದಿನಾಚರಣೆ
	19	ಬಸವ ಪಂಚಮಿ
	20	ನೀಲಾಂಬಿಕಾ ಷಷ್ಠಿ
ಸೆಪ್ಟೆಂಬರ್	17	ಪೂಜ್ಯ ಲಿಂಗಾನಂದ ಸ್ವಾಮಿಗಳ 83ನೆಯ ಜಯಂತಿ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಪೂಜ್ಯ ಮಾತೆ ಗಂಗಾದೇವಿಯವರ ವರ್ಧಂತಿ
ಅಕ್ಟೋಬರ್	02	ಗಾಂಧಿ ಮತ್ತು ಲಾಲ ಬಹದ್ದೂರ್‌ಶಾಸ್ತ್ರಿ ಜಯಂತಿ
	21	ಕಲ್ಯಾಣ ಕ್ರಾಂತಿ ಸಂಸ್ಮರಣೆ
	22	ಬಸವ ಧರ್ಮದ ವಿಜಯೋತ್ಸವ
	25,26, 27	14ನೆಯ ಕಲ್ಯಾಣ ಪರ್ವ
ನವೆಂಬರ್	01	ಕನ್ನಡ ರಾಜ್ಯೋತ್ಸವ
	12	ಚನ್ನಬಸವೇಶ್ವರ ಜಯಂತಿ
	25	ಚನ್ನಬಸವೇಶ್ವರ ಲಿಂಗೈಕ್ಯ ಸಂಸ್ಮರಣೆ



KALYANA KIRANA: Registrar of News Papers in India No : 19988/70, Postal Resgistration No. RNP/KA/BGW-50/WPP-17/2011-2014 Licenced to post the Printed Magazine without prepayment at MBC Bengaluru General Post office (GPO) on 3rd, 10th, 20th of every month. Total pages- 32+4(cover pages)